MYSORE LEGISLATIVE ASSEMBLY

Monday, 2nd September 1968

The House met in the Assembly Chamber, Vidhana Soudha, Bangalore, at One of the Clock.

Mr. DEPUTY SPEAKER (SRI D. MANJUNATH) in the Chair.

CONDOLENCE RESOLUTION *re:* THE DEMISE OF SHRI B. VAIKUNTA BALIGA, SPEAKER, LEGISLATIVE ASSEMBLY

Mr. DEPUTY SPEAKER.—I regret to announce the death of the hon'ble Sri B. Vaikunta Baliga, Speaker of the Mysore Legislative Assembly on 6th June 1968 at Madras. I request the Chief Minister to move the motion.

Sri VEERENDRA PATIL (Chief Minister).—Sir, I beg to move:

"That this House records its profound sense of sorrow at the death of Hon'ble Sri B. Vaikunta Baliga, Speakar of this House who will long be remembered with affection and regard for the distinction with which he discharged the duties of his office, and offers its condolences to the members of the bereaved family."

Mr. DEPUTY SPEAKER.—Motion moved :

"That this House records its profound sense of sorrow at the death of Hon'ble Sri B. Vaikunta Baliga, Speaker of this House who will long be remembered with affection and regard for the distinction with which he discharged the duties of his office, and offers its condolences to the members of the bereaved family."

†ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಸನ್ಮಾನ್ಯ ಸಭಾಧ್ಯಕ್ಷರೇ, ಈಪ್ರೋತ್ತಿನ ದಿವಸ ರಾಜಕೀಯ ಮತ್ತು ಆಡಳಿತದ ಜೀವನದಲ್ಲಿ ಅತ್ಯಂತ ದುಃಖದಾಯಕವಾದ ಸನ್ನಿವೇಶವಾಗಿದೆ. ದಿವಂಗತ ಶ್ರೀ ಬಿ. ವೈಕುಂತಬಾಳಿಗಾವರು ಇಪ್ಪೊತ್ತು ನಮ್ಮ ಪುಧ್ಯದಲ್ಲಿಲ್ಲ. ದಿವಂಗತ ಶ್ರೀ ಬಿ. ವೈಕುಂತ ಬಾಳಿಗಾವರು 1962 ರಿಂದ 1968 ಜೂನ್ 6ನೇ ತಾರೀಕಿನವರೆಗೂ ಈ ಮಾನ್ಯ ಸಭೆಯು ಅಧ್ಯಕ್ಷರಾಗಿ ಅವರು ಸೇವೆ ಮಾಡಿದ್ದು ಈ ಮಾನ್ಯ ಸಭೆಯುಎಲ್ಲಾ ಸದಸ್ಯರಿಗೂ ಗೊತ್ತುಂಟು. ಅವರ ನಿಧನದಿಂದ ನಾವು ಒಬ್ಬ ಶ್ರೇಷ್ಠ ಸಭಾಧ್ಯಕ್ಷರನ್ನು ಕಳೆದುಕೊಂಡಿದ್ದೇವೆ. ನನಗೆ ವೈಯಕ್ತಿಕವಾಗಿಯೂ ಹಾನಿಯಾಗಿದೆ ಎಂದು ಹೇಳಬೇಕಾಗಿದೆ. ಏತಕ್ಕೆಂದರೆ ಅವರು ಮತ್ತು ನಾನು

†Indicates that the remarks or speeches have not been revised by the member concerned.

(ಶ್ರೀ ವೀರೇಂದ್ರ ಪಾಟೀಲ್)

ಅನೇಕ ವರ್ಷಗಳವರೆಗೂ ಜೊತೆಯಲ್ಲಿ ಕೆಲಸ ಮಾಡುತ್ತಾ ಇದ್ದೆವು. ಮತ್ತು ಅವರು ನನ್ನ ಮಟ್ಟಿಗೆ ಪಿತೃಭಾವನೆ ಮತ್ತು ಒಂದು ಪ್ರೇಮ ಇಟ್ಟುಕೊಂಡಿದ್ದರು. ಅವರು ಈ ಸಭೆಯಲ್ಲಿ ಕಾರ್ಯಕಲಾಪಗಳನ್ನು ಯಾವರೀತಿಯಿಂದ ನಡೆಸುತ್ತಾ ಇದ್ದರು, ಯಾವ ಸತ್‌ಸಂಪ್ರದಾಯಗಳನ್ನು ಹಾಕಿಕೊಂಡಿದ್ದರು ಎನ್ನತಕ್ಕಂಥಾದ್ದು ಎಲ್ಲರಿಗೂ ಗೊತ್ತಿದೆ.

ಅವರು 1895, ಏಪ್ರಿಲ್ 10 ರಲ್ಲಿ ಬಂಟವಾಳದಲ್ಲಿ ಜನಿಸಿ ಅಲ್ಲಿಯೇ ಬೆಳೆದು ಅವರು ವಿದ್ಯಾಭ್ಯಾಸವನ್ನು ಮಂಗಳೂರಿನಲ್ಲಿ ಮಾಡಿ ಅನಂತರ ಮದ್ರಾಸಿನ ಪಚ್ಚೈಯಪ್ಪ ಕಾಲೇಜಿನಲ್ಲಿ ಡಿಗ್ರಿ ಹೊಂದಿ, ಅಲ್ಲಿಂದ ಲಾ ಕಾಲೇಜಿನಲ್ಲಿ ಡಿಗ್ರಿ ಪಡೆದು 1916-17 ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಅತ್ಯುತ್ತಮ ವಿದ್ಯಾರ್ಥಿಯೆನಿಸಿ ಆಲ್ಲ ಸುವರ್ಣ ಪದಕದ ಪ್ರಶಸ್ತಿಯನ್ನೂ ಕೂಡ ಸಂಪಾದಿಸಿದರು. ತಮ್ಮ ವ್ಯಾಸಂಗ ಮುಗಿಸಿಕೊಂಡು ತಮ್ಮ ಊರಿಗೆ ಬಂದು ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ಸಾರ್ವಜನಿಕ ಚಟುವಟಿಕೆಗಳಲ್ಲಯೂ ಅವರು ಬಹಳ ಮಾಟ್ಟಗೆಭಾಗವಹಿಸಿದಂಥಾದ್ದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ. ಅನೇಕ ಸಂಘಸಂಸ್ಥೆಗಳಲ್ಲಿ ಯಜಮಾನಿಕೆ ವಹಿಸಿ ಕೆಲಸ ಮಾಡುತ್ತಾ ಇದ್ದರು. ಆದರಲ್ಲಿ ಕೆಲವು ಹೇಳುತ್ತೇನೆ. ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್, ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಕಂಪನಿ, ಮತ್ತು ಮಂಗಳೂರಿನ ಮುನಿಸಿಪಾಲ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಇತ್ಯಾದಿ ಅನೇಕ ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಬಹಳ ಮಟ್ಟಿಗೆ ದುಡಿದಿದ್ದಾರೆ. ಇಷ್ಟೇ ಅಲ್ಲದೆ ಅವರು ಕಾಂಗ್ರೆಸ್ಸಿನ ನಿಷ್ಠಾವಂತ ಶಿಸ್ತಿನ ಕಾರ್ಯಕರ್ತರಾಗಿ ಬಹಳಮಟ್ಟಿಗೆ ಶ್ರಮಿಸಿದ್ದಾರೆ ಎನ್ನತಕ್ಕಂಥಾದ್ದನ್ನು ಈಪ್ರೊತ್ತಿನ ದಿವಸ ಈ ಸಭೆಯಲ್ಲಿ ಒಪ್ಪಿಕೊಳ್ಳುತ್ತೇನೆ. ಅವರು 1952 ರಲ್ಲಿ ಪಾಣೆಮಂಗಳೂರಿನಿಂದ ಮದ್ರಾಸ್ ಅಸೆಂಬ್ಲಿಗೆ ಆರಿಸಿ ಬಂದರು. 1957 ರಲ್ಲಿ ಮಂಗಳೂರಿನ ಕ್ಷೇತ್ರದಿಂದ ಈ ಸಭೆಗೆ ಆರಿಸಿ ಬಂದರು. ಕಳೆದ ಎರಡು ಮಹಾಚುನಾವಣೆಗಳಲ್ಲಿ ಬೆಳ್ತಂಗಡಿ ಕ್ಷೇತ್ರದಿಂದ ಆಯ್ಕೆ ಹೊಂದಿ ಈ ಸಭೆಗೆ ಬಂದಿದ್ದು ಅನೇಕರಿಗೆ ಗೊತ್ತಿದೆ. 1957-58 ರಲ್ಲಿ ಮಂತ್ರಿಗಳಾಗಿ, ಮತ್ತು 1961 ರಿಂದ 1962 ರವರೆಗೆ ಮತ್ತೆ ಮಂತ್ರಿಗಳಾಗಿ, 1962 ರಿಂದ ಈಚೆಗೆ ಅಂದರೆ ಜೂನ್ 6, 1968 ರವರೆಗೂ ನತಶವಾಗಿ ಅವರು ನಮ್ಮ ಸಭಾಧ್ಯಕ್ಷರಾಗಿ ಕೆಲಸ ಮಾಡಿದಂಥಾದ್ದನ್ನು ಈಪ್ರೊತ್ತು ನಾವು ಮರೆಯುವಂತಿಲ್ಲ. ಅವರು ನಮ್ಮ ಮಧ್ಯದಲ್ಲಿ ಇರರಾರದೇ ಇರುವುದರಿಂದ, ಅವರ ಅಗಲುವಿಕೆಯಿಂದ ನಮಗೆಲ್ಲಾ ತುಂಬರಾರದಷ್ಟು ಹಾನಿಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಅಧ್ಯಕ್ಷರಾಗಿದ್ದಾಗ ಯಾವ ರೀತಿಯಿಂದ ನಡೆದುಕೊಳ್ಳುತ್ತಾ ಇದ್ದರು ಎನ್ನುವುದು ನಮಗೆಲ್ಲಾ ಗೊತ್ತಿದೆ. ಅವರು ಕ್ಲಿಷ್ಟ ಸನ್ನಿವೇಶದಲ್ಲೂ ಕೂಡ ಸಹನೆ, ತಾಳ್ಮೆಗಳಿಂದ ದಾರಿ ದೀಪವಾಗಿ ನಮಗೆ ಮಾರ್ಗದರ್ಶನ ಮಾಡುತ್ತಾ ಇದ್ದರು. ಅವರಲ್ಲರುವಂಥ ಕರ್ತವ್ಯ ದೃಷ್ಟಿ, ಪಕ್ಷಪಾತ ರಹಿತ ದೃಷ್ಟಿ, ನ್ಯಾಯ ದೃಷ್ಟಿ, ನಿರ್ಮಲ ಅಂತಃಕರಣ ಮುಂತಾದ್ದು ನಮಗೆಲ್ಲರಿಗೂ ಅನುಕರಣೀಯವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಅಪಾರ ಜ್ಞಾನವನ್ನು ಸಂಪಾದಿಸಿದ್ದರು ಮತ್ತು ಪುಸ್ತಕವನ್ನು ಓದುವುದರಲ್ಲಿ ಅವರಿಗೆ ಬಹಳಮಟ್ಟಿಗೆ ಅಭಿರುಚಿ ಇತ್ತು. ಸ್ವಲ್ಪ ಸಮಯ ಇದ್ದರೂ ಕೂಡ ಏನಾದರೂ ಪುಸ್ತಕ ಓದಿ ತಮ್ಮ ಸಮಯವನ್ನು ಕಳೆಯುತ್ತಾ ಇದ್ದರು. ಎಲ್ಲರೂ ಹೆಚ್ಚು ಹೆಚ್ಚು ಓದಬೇಕು, ಹೆಚ್ಚು ಹೆಚ್ಚು ಜ್ಞಾನವನ್ನು ಸಂಪಾದನೆ ಮಾಡಿಕೊಳ್ಳಬೇಕು, ಈ ಮನೆಯ ಸದಸ್ಯರು ಯಾವಾಗಲೂ ಪಾರ್ಲಿಮೆಂಟರಿ ಪ್ರಾಕ್ಟೀಸನ್ನು ತಿಳಿದುಕೊಳ್ಳಬೇಕು ಎನ್ನುವ ಆಸಕ್ತಿ ಅವರಲ್ಲಿ ಇತ್ತು, ಆರೀತಿ ಪದೇ ಪದೇ ಬುದ್ಧಿಯನ್ನು ಹೇಳುತ್ತಾ ಇದ್ದರು. ಅಲ್ಲದೆ ನಮಗೆಲ್ಲರಿಗೂ ಹೆಚ್ಚಿನ ವ್ಯಾಸಂಗ ಮಾಡುವುದಕ್ಕೆ ಅವಕಾಶವಾಗುವಂತೆ ಒಂದು ಉತ್ತಮವಾದ ಲೈಬ್ರರಿಯನ್ನು ಕಟ್ಟುವುದಕ್ಕೆ ಬಹಳ ಮಟ್ಟಿಗೆ ಶ್ರಮಿಸಿದ್ದಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ನೆನಸಿಕೊಳ್ಳಬೇಕಾಗುತ್ತದೆ, ಈ ಸಭೆಯ ನಿಯಮಗಳು, ಕಾನೂನುಗಳು ಅವರ ನಾಲಗೆಯಮೇಲೆ ಇತ್ತು ಎಂದು ಅನಿಸುತ್ತದೆ. ಈ ಸಭೆಯ ಗೌರವ ಮತ್ತು ಘನತೆಗೆ ಬಹಳ ಮುತುವರ್ಜಿಯಿಂದ ಎನೂ ಧಕ್ಕೆ ಬರರಾರದಂತೆ ನೋಡಿಕೊಳ್ಳಬೇಕು ಎಂದು ಬಹಳ ಮಟ್ಟಿಗೆ ಶ್ರಮಿಸುತ್ತಾ ಇದ್ದರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಂತಹ ಆದರ್ಶವಾದಿ ಸಭಾಧ್ಯಕ್ಷರನ್ನು ನಾವು ಕಳೆದುಕೊಂಡಿದ್ದೇವೆ. ಇದು ನಮ್ಮ ದುರ್ದೈವ ಎಂದು ತಿಳಿದುಕೊಂಡಿದ್ದೇನೆ. ಅಂತಹ ಆದರ್ಶವಾದಿ ನಿರ್ಮಲ ಅಂತಃಕರಣದ, ನಿಷ್ಪಕ್ಷಪಾತವಾದ ಮತ್ತು ಒಳ್ಳೆ ರೀತಿಯಿಂದ ನಡೆಸುವಂಥಾ ಸಭಾಧ್ಯಕ್ಷರು ಸಿಕ್ಕುವಂಥಾದ್ದು ಬಹಳ ದುರ್ಲಭ ಎಂದು ಅನಿಸುತ್ತದೆ. ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರು ಕಳೆದ 6 ವರ್ಷದವರೆಗೂ ಹಾಕಿ ಕೊಟ್ಟಂಥ ಸತ್‌ಸಂಪ್ರದಾಯಗಳು ನಮ್ಮಿಂದ ದೂರ ಸರಿಯಲಾರವು ಎಂದು ಅನಿಸುತ್ತದೆ. ಅವರು ಏನು ಸತ್‌ಸಂಪ್ರದಾಯಗಳನ್ನು ಹಾಕಿಕೊಟ್ಟಿದ್ದರೋ ಅದನ್ನು ಮರೆಯರಾರದಂತೆ ಅವರ ಹೆಜ್ಜೆಯ ಮೇರೆ ಹೆಜ್ಜೆ ಇಟ್ಟು ಈ ಸಭೆಯ ಗೌರವ ಸತ್‌ಸಂಪ್ರದಾಯಗಳನ್ನು ಕಾಪಾಡಿಕೊಂಡು ಹೋಗುವಂಥಾದ್ದು

ನಮ್ಮೆಲ್ಲರ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ ಮತ್ತು ಅವರ ಬಂಧುವರ್ಗದವರಿಗೆ ಸಂತಾಪವನ್ನು ಸೂಚಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ದಿವಂಗತ ಶ್ರೀ ವೈಕುಂಠ ಬಾಳಿಗಾರವರ ಆತ್ಮಕ್ಕೆ ಶಾಂತಿ ಕೋರುವ ಮತ್ತು ಶ್ರದ್ಧಾಂಜಲಿಯನ್ನು ಅರ್ಪಿಸುವ ನಿರ್ಣಯವನ್ನು ಸಭಾನಾಯಕರು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಆ ನಿರ್ಣಯಕ್ಕೆ ನನ್ನ ಅತಿ ಪೂರ್ಣವಾದ ಬೆಂಬಲವನ್ನು ಕೊಡುತ್ತೇನೆ. ಶ್ರೀಮಾನ್ ದಿವಂಗತ ಬಾಳಿಗಾರವರು ಶಾಸನಸಭಾಧ್ಯಕ್ಷರಾಗಿ ಸುಮಾರು 6½ ವರ್ಷಗಳ ಕಾಲ ನಿರಾತಂಕವಾಗಿ ಈ ಸಭೆಯ ಘನತೆಗೌರವಗಳನ್ನು ಎತ್ತಿ ಹಿಡಿದು ಕಾರ್ಯಾಡತಕ್ಕಂಥ ಸಾಮರ್ಥ್ಯವನ್ನು ತೋರಿಸಿ ಈ ಪ್ರಜಾಪ್ರಭುತ್ವದಲ್ಲಿ ಶಾಸನಸಭಾಧ್ಯಕ್ಷರು ಎಷ್ಟರಮಟ್ಟಿಗೆ ತಮ್ಮ ಕರ್ತವ್ಯಪರಿಪಾಲನೆ ಮಾಡಬಹುದು ಎನ್ನುವುದನ್ನು ಈ ದೇಶಕ್ಕೆ ತೋರಿಸಿಕೊಟ್ಟು ಹೋಗಿರತಕ್ಕಂಥ ಒಬ್ಬ ವ್ಯಕ್ತಿ. ಶ್ರೀಮಾನ್ ಬಾಳಿಗಾರವರು ಶಾಸನಸಭೆಯಲ್ಲಿ ಯಾವುದೇ ಬರಲಿ, ಅದನ್ನು ಪರಿಪಕ್ವವಾಗಿ ವಿಚಾರ ಮಾಡಿ ಅದರ ಬಗ್ಗೆ ತಮಗೆ ಸಂಪೂರ್ಣ ನಂಬಿಕೆ ಹುಟ್ಟದ ಹೊರತು ಅವರು ಶಾಸನ ಸಭೆಗೆ ಬರುವ ಅಭ್ಯಾಸ ಇರಲಿಲ್ಲ. ಶಾಸನಸಭೆಯಲ್ಲಿ ರೂಲಿಂಗ್ ಕೊಡಬೇಕಾದರೂ ಕೂಡ ಶ್ರೀಮಾನ್ ಬಾಳಿಗಾರವರ ವ್ಯಕ್ತಿತ್ವ ಎಷ್ಟರಮಟ್ಟಿಗೆ ಇತ್ತು ಎಂದರೆ ನಮ್ಮ ಲೈಬ್ರರಿಯಲ್ಲಿರತಕ್ಕ ಎಲ್ಲಾ ಪುಸ್ತಕಗಳನ್ನೂ ತರಿಸಿ ಓದಿ ಅವರಿಗೆ ಅದು ಸಂತುಷ್ಟವಾದರೆ ಮಾತ್ರ ಈ ಸಭೆಗೆ ಬಂದು ರೂಲಿಂಗ್ ಕೊಡುತ್ತಾ ಇದ್ದರು. ಅವರಿಗೆ ಓದುವುದು ಎಂದರೆ ಅಷ್ಟೊಂದು ಅತ್ಯುತ್ಸುಮವಾದ ವಸ್ತು. ಈ ಶಾಸನ ಸಭೆಯಲ್ಲಿ ಅವರು ಬಂದಮೇಲೆ ಯಾವುದೇ ಮಸೂದೆ ಬರಲಿ ಅದಕ್ಕೆ ತಕ್ಕ ಎಲ್ಲಾ ಪುಸ್ತಕಗಳನ್ನೂ ತರಿಸಿ ಅದನ್ನು ಲೈಬ್ರರಿಯಲ್ಲಿ ಜೋಡಿಸಿ ಅದು ಶಾಸಕರಿಗೆ ಉಪಯೋಗವಾಗುವ ಹಾಗೆ ಮಾಡತಕ್ಕಂಥ ಕೆಲಸ ಅವರ ಕಾಲದಲ್ಲಿ ನಡೆದಿತ್ತು. ಈ ಲೈಬ್ರರಿ ಎಂದರೆ ಅವರಿಗೆ ಎಷ್ಟೊಂದು ಸಂತೋಷವಾಗಿತ್ತು ಎಂದರೆ, ಮೈಸೂರು ಸಂಸ್ಥಾನದಲ್ಲಿ ಎಲ್ಲಾ ಕಡೆಯೂ ಕೂಡ ಲೈಬ್ರರಿ ಇರಬೇಕು ಎಂದು ಅವರು ಲೈಬ್ರರಿ ಸಂಸ್ಥೆಯ ಅಧ್ಯಕ್ಷರಾಗಿ, ಕೆಲಸ ಮಾಡುತ್ತಾ ಇದ್ದರು. ದಿವಂಗತ ಶ್ರೀಮಾನ್ ವೈಕುಂಠಬಾಳಿಗಾರವರ ಹೆಸರನ್ನು ಸಾರ್ಥಕ ಮಾಡಬೇಕಾಗಿದ್ದರೆ ನಮ್ಮ ರೆಜಿಸ್ಟ್ರೇಚರ್ ಲೈಬ್ರರಿ ಏನು ಇದೆ ಅದಕ್ಕೆ 2–3 ಅಂತಸ್ತಿನ ಕಟ್ಟಡವನ್ನು ಕಟ್ಟಿ ಪಾರ್ಲಮೆಂಟರಿ ಲಿಟ್ರೇಚರ್ ಏನು ಇದೆ ಅದನ್ನೆಲ್ಲಾ ತರಿಸಿ, ಇದು ಎಲ್ಲಾ ಕಡೆಯಲ್ಲಿರುವುದಕ್ಕಿಂತಲೂ ಉತ್ತಮಮಟ್ಟದ ಲೈಬ್ರರಿ ಆಗುವಂತೆ ಅವರಿಗೆ ಒಂದು ಸ್ಮಾರಕ ಮಾಡುವುದು ಸರ್ಕಾರದ ಕರ್ತವ್ಯ ಎಂದು ನಾನು ಸಲಹೆ ಮಾಡುತ್ತೇನೆ. ದಿವಂಗತ ಬಾಳಿಗಾರವರ ಜೊತೆಯಲ್ಲಿ ವಿರೋಧಪಕ್ಷದ ನಾಯಕನಾಗಿ ಕಳೆದ 6 ವರ್ಷಗಳಿಂದಲೂ ನಿಕಟ ಸಂಪರ್ಕವನ್ನು ಹೊಂದಿದ್ದೆನು. ಶ್ರೀಮಾನ್ ಬಾಳಿಗಾ ಅವರು ಶಾಸನ ಸಭೆಗೆ ಬಂದರೆ ಸಭೆಗೆ ಮತ್ತು ಸದಸ್ಯರುಗಳಿಗೆ ಬಹಳ ಗೌರವ ಕೊಟ್ಟು ಪೀಠದಲ್ಲಿ ಕುಳಿತುಕೊಳ್ಳುತ್ತಿದ್ದರು. ಕಾನೂನಿನ ಬಗ್ಗೆ ಮಾನ್ಯ ಸದಸ್ಯರುಗಳಿಗೂ ಅವರಿಗೂ ಏನಾದರೂ ಘರ್ಷಣೆಯಾದರೆ, ಅಂತಹವರನ್ನು ತಮ್ಮ ಛೇಂಬರಿಗೆ ಕರೆಸಿಕೊಂಡು ಶಾಸನ ಸಭೆಯ ರೂಲ್ಸ್ ಮತ್ತು ನಡೆವಳಿಕೆಗಳನ್ನು ಯಾವ ರೀತಿ ಅನುಸರಿಸಬೇಕು ಎಂಬುದನ್ನು ಹೇಳುತ್ತಿದ್ದರು. ಮನೆಯಲ್ಲಿ ಮುದುಕರಿಗೂ ಮಕ್ಕಳಿಗೂ ಯಾವ ರೀತಿ ಒಂದೊಂದು ಸಾರಿ ಜಗಳವಾಗುತ್ತದೋ ಅದೇ ರೀತಿ ಈ ಸಭೆಯಲ್ಲಿ ಒಂದೊಂದು ಸಾರಿ ಆಗುತ್ತಿತ್ತು. ಪಾಯಿಂಟ್ ಆಫ್ ಆರ್ಡರ್ ಮೂಲಕ ಯಾವ ಸದಸ್ಯರಾದರೂ ಗಲಾಟೆ ಮಾಡಿದಾಗ ಅವರನ್ನು ತಮ್ಮ ಛೇಂಬರ್‌ಗೆ ಕರೆಸಿಕೊಂಡು ಸಮಾಧಾನ ಹೇಳುತ್ತಿದ್ದರು. ಅದುವರೆಗೂ ಸಹ ಅವರಿಗೆ ಸಮಾಧಾನ ಇರುತ್ತಿರಲಿಲ್ಲ. ಈ ರೀತಿಯು ಒಂದು ಒಳ್ಳೆಯ ರೀತಿಯ ಮನುಷ್ಯತ್ವ ಅವರಲ್ಲಿ ಇತ್ತು. ಒಳ್ಳೆಯ ಗುಣವನ್ನು ಹೊಂದಿದವರು. ಯಾರೇ ಅವರ ಮನೆಗೆ ಹೋಗಲಿ ಅವರಿಗೆ ತಿಂಡಿ ಕೊಟ್ಟು ಬಹಳ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಅವರು ಮಲೆನಾಡಿನಿಂದ ಬಂದವರು. ಅವರಲ್ಲಿ ಒಳ್ಳೆಯ ಉದಾರತ್ವ ಇತ್ತು. ಒಳ್ಳೆಯ ವ್ಯಕ್ತಿಯಾದಂಥ ಅವರು ನಮ್ಮ ಶಾಸನ ಸಭೆಯಲ್ಲಿ ಕಳೆದ ಆರೂವರೆ ವರ್ಷಗಳಿಂದಲೂ ಅಧ್ಯಕ್ಷರಾಗಿ ಕೆಲಸ ಮಾಡಿದರು. ಈ ಶಾಸನ ಸಭೆಯ ಬಗ್ಗೆ ಅವರಿಗೆ ಎಷ್ಟೊಂದು ಭಕ್ತಿ ಇತ್ತು ಎಂದು ಹೇಳುವುದಾದರೆ ಅವರು ಒಳಕ್ಕೆ ಬಂದಾಗ ತಮ್ಮ ಪೀಠವನ್ನು ಅಲಂಕರಿಸುವುದಕ್ಕೆ ಮುಂಚೆ ನಾಲ್ಕು ಕಡೆಗೂ ಕೈಜೋಡಿಸಿ ಕೈಮುಗಿಯುತ್ತಿದ್ದರು. ಆ ಒಂದು ದೃಶ್ಯ ನೋಡುವುದಕ್ಕೆ ಬಹಳ ಚೆನ್ನಾಗಿರುತ್ತಿತ್ತು. ಅವರು ಈ ಶಾಸನ ಸಭೆಯ ಅಧ್ಯಕ್ಷರಾಗಿದ್ದುದ್ದು ಮಾತ್ರವಲ್ಲದೆ ಎಲ್ಲಾ ಸದಸ್ಯರಿಗೂ ಸಹ ಕಾನೂನಿನ ಬಗ್ಗೆ ತಿಳಿವಳಿಕೆ ಕೊಡುತ್ತಿದ್ದರು. ಮಧ್ಯಾಹ್ನ ಒಂದು ಗಂಟೆಗೆ ಸಭೆಗೆ ಬಂದರೆ ಸಾಯಂಕಾಲ 6 ಗಂಟೆವರೆಗೂ ಸಹ ಕುಳಿತಿದ್ದು ಯಾರು ಯಾರು ಏನೇನು ಮಾತನಾಡುತ್ತಾರೆ ಎಂಬುದನ್ನು ಒಂದು ಶಬ್ದ ಕೂಡ ಬಿಡದೆ ಕೇಳುತ್ತಿದ್ದರು. ಈ ಸಭೆಯ ನಡೆವಳಿಕೆಗಳನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದದು. ಅವರು ನಿಧನ

(ಶ್ರೀ ಎಸ್. ಶಿವಪ್ಪ)

ರಾಗಿದ್ದು ನಮಗೆರ್ಲಾ ಬಹಳ ನಷ್ಟವಾಗಿದೆ. ಶ್ರೀಮಾನ್ ಬಾಳಿಗಾ ಅವರು ಕಣ್ಮರೆಯಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಕೋರಿ ಅವರ ಬಂಧುವರ್ಗದವರಿಗೆ ಅವರ ಅಗಲಿಕೆಯಿಂದ ಆದ ದುಃಖವನ್ನು ಸಹಿಸುವ ಶಕ್ತಿಯನ್ನು ದಯಾಮಯನು ಪಾಲಿಸಲಿ ಎಂದು ಪ್ರಾರ್ಥಿಸಿ ಮತ್ತೊಮ್ಮೆ ಅವರ ಆತ್ಮಕ್ಕೆ ಶಾಂತಿ ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).—ಮಾನ್ಯ ಅಧ್ಯಕ್ಷರೇ, ಮಾನ್ಯ ಬಾಳಿಗಾ ಅವರ ನಿಧನದಿಂದ ನಮ್ಮ ದೇಶಕ್ಕೆ, ನಮ್ಮ ರಾಜ್ಯಕ್ಕೆ ಅಪಾರ ಹಾನಿಯಾಗಿದೆ. ಈ ಕರ್ನಾಟಕ ರಾಜ್ಯ ವಾಗುವುದಕ್ಕಿಂತಲೂ ಹಿಂದಿನಿಂದಲೂ ನನಗೆ ಅವರು ಚಿರಪರಿಚಿತರು. ಅವರು ಎಲ್ಲಕ್ಕಿಂತಲೂ ಮಿಗಿಲಾಗಿ ಸುಸಂಸ್ಕೃತರು ಮತ್ತು ಒಳ್ಳೆಯ ಸೌಜನ್ಯ ಸ್ವಭಾವದವರು. ಯಾವ ಕೆಲಸವನ್ನು ಕೈಕೊಂಡರೂ ಸಹ ಬಹಳ ಪರಿಪಕ್ವವಾಗಿ ಮಾಡತಕ್ಕವರಾಗಿದ್ದರು. ಅವರು ಇಡೀ ಭರತಖಂಡದಲ್ಲಿಯೇ ವಕೀಲ ವೃತ್ತಿಯಲ್ಲಿ ಒಳ್ಳೆಯ ಹೆಸರನ್ನು ಪಡೆದವರಾಗಿದ್ದರು. ಹಾಗೂ ಸಾರ್ವಜನಿಕ ಜೀವನಕ್ಕೆ ಬಂದ ಮೇಲೆ ತಮ್ಮ ಒಂದು ಪ್ರತಿಷ್ಠೆಯನ್ನು ತೋರಿಸಿದರು. ಮೈಸೂರು ರಾಜ್ಯಕ್ಕೆ ಮದ್ರಾಸಿನ ಒಂದು ಭಾಗ ಸೇರಿದಮೇಲೆ ಅವರು ನಮ್ಮಲ್ಲಿ ಸಂಪರ್ಕ ಹೊಂದಿದರು. ಅವರು ಬಹಳ ಆದರ್ಶವಾಗಿ ಎರ್ಲಾ ಕ್ಷೇತ್ರಗಳಲ್ಲಿಯೂ ಕೆಲಸ ಮಾಡಿದ್ದಾರೆ. ಅವರು ಒಂದು ನಿಮಿಷ ಕೂಡಾ ವೃಥಾ ಕಾಲ ಕಳೆಯು ತ್ತಿರಲಿಲ್ಲ. ಅವರು ತಮ್ಮ ಮಿತ್ರರೂ ಕೂಡ ಒಂದು ನಿಮಿಷ ಕೂಡ ವೃಥಾ ಕಾಲ ಕಳೆಯಬಾರದು ಎಂಬ ಅಭಿಪ್ರಾಯ ಇಟ್ಟುಕೊಂಡಿದ್ದರು. ಅವರು ಈ ಶಾಸನ ಸಭೆಯು ಅಧ್ಯಕ್ಷರಾದ ಮೇಲೆ ಈ ಸಭೆಯನ್ನು ಇಡೀ ಭರತಖಂಡದಲ್ಲಿಯೇ ಆದರ್ಶವಾದ ರೀತಿಯಿಂದ ನಡೆಸಿಕೊಂಡು ಹೋಗಬೇಕು ಎಂಬ ಕುತೂಹಲವನ್ನು ಉಳ್ಳವರಾಗಿದ್ದರು. ನಮ್ಮ ರಾಜ್ಯದ ಶಾಸನಕರೂ ಕೂಡ ಒಳ್ಳೆಯ ರೀತಿ ಯಿಂದ ಕೆಲಸ ಮಾಡಿಕೊಂಡು ಹೋಗಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದರು. ಕೆಲವುಸಲ ವಿಷಮ ಪರಿಸ್ಥಿತಿ ಈ ಸಭೆಯಲ್ಲಿ ಉಂಟಾದಾಗ ತಮ್ಮ ಒಂದು ಒಳ್ಳೆಯ ಶಕ್ತಿಯಿಂದ, ಒಳ್ಳೆಯ ಚಾಕಚಕ್ಯತೆ ಯಿಂದ ಮತ್ತು ಬುದ್ಧಿವಂತಿಕೆಯಿಂದ ಅದನ್ನು ಬಗೆಹರಿಸಿ ಸಭೆಯು ಕಾನಕಾರ್ಯಗಳನ್ನು ನಡೆಸಿ ಕೊಂಡು ಹೋಗುತ್ತಿದ್ದರು. ಈ ಸಭೆಯಲ್ಲಿ ಅವರನ್ನು ಕಂಡರೆ ಯಾರಿಗೂ ಭಿನ್ನಾಭಿಪ್ರಾಯವಿರಲಿಲ್ಲ. ಇಂಥವರ ನಿಧನದಿಂದ ನಮಗೂ ನಷ್ಟವಾಗಿದೆ, ರಾಜ್ಯಕ್ಕೂ ನಷ್ಟವಾಗಿದೆ ಮತ್ತು ದೇಶಕ್ಕೂ ನಷ್ಟವಾ ಗಿದೆ. ವಿಧಿವಿಲಾಸವನ್ನು ಯಾರಿಂದಲೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಅವರಿಗೆ ವಯಸ್ಸಾಗಿದ್ದರೂ ಸಹ ಇನ್ನೂ ಕೆಲವು ವರ್ಷಗಳ ಕಾಲ ನಮ್ಮ ಜೊತೆಯಲ್ಲಿ ಇರಬೇಕೆಂಬ ಕುತೂಹಲ ನಮಗಿತ್ತು. ಆದರೆ ದೈವೇಚ್ಛೆ. ಅವರು ಮದ್ರಾಸ್ ರಾಜ್ಯದಲ್ಲಿ ನಿಧನರಾಗಿದ್ದು ನಮಗೆ ಬಹಳ ಶೋಕವಾಗಿದೆ. ಅವರ ನಿಧನದಿಂದ ಆದ ದುಃಖವನ್ನು ಸಹಿಸಲು ಅವರ ಸಂಬಂಧೀಕರಿಗೆ, ಪುತ್ರರಿಗೆ ಮತ್ತು ಮಿತ್ರರಿಗೆ ಈ ಸಭೆಯು ಅನುತಾಪವನ್ನು ಕಳಿಸುವುದರಲ್ಲಿ ನಾನು ಕೂಡ ಸೇರುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ (ಶಿಗ್ಗಾಂವಿ).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಬಾಳಿಗಾ ಅವರು ನನಗೆ ಪರಿಚಯವಾಗಿ 25–30 ವರ್ಷಗಳಾಯಿತು. ಅವರು ಯಾವುದೇ ಕೆಲಸವನ್ನು ತೆಗೆದುಕೊಳ್ಳಲಿ ಒಳ್ಳೆಯ ನಿಷ್ಠೆಯಿಂದ, ವಿಶ್ವಾಸದಿಂದ ಮಾಡುತ್ತಿದ್ದರು. ಅವರು ಮದ್ರಾಸ್ ಶಾಸನಸಭೆಯಲ್ಲಿದ್ದಾಗ ಬಹಳ ದಕ್ಷತೆಯಿಂದ ಕೆಲಸಮಾಡಿ ಎಲ್ಲರ ಗೌರವಕ್ಕೂ ಪಾತ್ರರಾಗಿದ್ದರು. ಒಳ್ಳೆಯ ವಕೀಲರಾಗಿ ಕೆಲಸ ಮಾಡಿದರು. ತನ್ನ ರಾಜ್ಯ, ತನ್ನ ರಾಷ್ಟ್ರ ಎಷ್ಟರಮಟ್ಟಿಗೆ ಸಮಗ್ರದೃಷ್ಟಿಯಿಂದ ಅಭಿವೃದ್ಧಿಯಾಗಬೇಕು ಎಂಬ ಬಗ್ಗೆ ಯಾವಾಗಲೂ ಯೋಚನೆ ಮಾಡುತ್ತಿದ್ದರು. ಆ ಬಗ್ಗೆ ಅವರಲ್ಲಿ ವಿಶ್ವಾಸವಿತ್ತು. ಅವರನ್ನು ಮೀರಿಸಿದವರು ಯಾರೂ ಇಲ್ಲ. ಅವರಿಗೆ ಎಷ್ಟೇ ಕೆಲಸವಿದ್ದರೂ ಸಹ ನನಗೆ ಹೇಳಿಕಳಿಸಿ ಹೇಳುತ್ತಿದ್ದರು, ಇಂತಹ ಕಡೆ ಕೈಗಾರಿಕೆಯಾದರೆ ವ್ಯವಸಾಯಕ್ಕೆ ಅನುಕೂಲವಾಗುತ್ತದೆ ಎಂಬುದಾಗಿ ವಗೈರೆ. ಸದಾ ಯೋಚನೆ ಮಾಡುವ ವ್ಯಕ್ತಿ. ಅವರು ದೊಡ್ಡವರಾಗಿದ್ದರು. ಯೋಗ್ಯರಾಗಿದ್ದರು ಹಾಗು ನಿಷ್ಪಕ್ಷಪಾತದಿಂದ ಈ ಸಭೆಯಲ್ಲಿ ಕೆಲಸ ಮಾಡಿದರು. ಅವರ ಕೆಲಸವನ್ನು ನಾವೆಲ್ಲರೂ ಬಹಳವಾಗಿ ಮೆಚ್ಚಿದ್ದೇವೆ. ಅವರನ್ನು ಮಾನ್ಯಸದಸ್ಯರುಗಳು ಹೊಗಳುವುದು ಸ್ವಾಭಾವಿಕ. ಅವರ ಕಾರ್ಯದಕ್ಷತೆ, ನೈಪುಣ್ಯತೆ ಮತ್ತು ಅಪಾರ ಅನುಭವಗಳನ್ನು ನೋಡಿ ಅವರನ್ನು ಲೋಕಸಭೆಯ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಪ್ರಯತ್ನಪಟ್ಟೆವು. ಆದರೆ ಶ್ರೀಮಾನ್ ಬಾಳಿಗಾ ಅವರು ಅದಕ್ಕೆ ಒಪ್ಪಲಿಲ್ಲ. ನಾನು ಈ ರಾಜ್ಯದಲ್ಲಿಯೇ ಇರುತ್ತೇನೆ, ಕರ್ನಾಟಕ ಬಿಟ್ಟು ಹೋಗುವುದಕ್ಕೆ ಇಷ್ಟವಿಲ್ಲವೆಂದು ಹೇಳಿದರು, ದೆಹಲಿಯಲ್ಲಿಯೂ ಸಹ ಅನೇಕರಿಗೆ ಇವರು ಲೋಕಸಭೆಯ ಅಧ್ಯಕ್ಷರಾದರೆ ಒಳ್ಳೆಯ ದಕ್ಷತೆಯಿಂದ ಕೆಲಸವಾಗುತ್ತದೆ ಎನ್ನುವ ಅಪೇಕ್ಷೆ ಇತ್ತು. ಇವತ್ತಿನದಿವಸ ಅವರನ್ನು ನಾವು ಕಳೆದುಕೊಂಡಿದ್ದೇವೆ. ಅದು ನಮ್ಮ ದುರದೃಷ್ಟ. ಇವತ್ತಿನದಿವಸ ಅವರನ್ನು ಮೀರಿಸುವಂಥ ಸಭಾಧ್ಯಕ್ಷರನ್ನು ಅರಿಸುವುದು ನಮಗೆ ಕಷ್ಟವಾಗಿ ಕಾಣುತ್ತಿದೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ

ಎಂದು ಹೇಳಿ ಮಾನ್ಯ ಸದಸ್ಯರುಗಳು ಇದುವರೆಗೆ ಅವರ ಬಗ್ಗೆ ಏನು ಒಂದು ಗುಣಗಾನ ಮಾಡಿದ್ದಾರೆ ಅದನ್ನು, ನಾನು ಅನುಮೋದಿಸಿ ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕ ನೂಚನೆಗೆ ಅನುಮೋದನೆ ಕೊಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ನನ್ಮಾನ್ಯ ಅಧ್ಯಕ್ಷರೇ, ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ನೂಚನೆಯನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಆಡಲಿಚ್ಛಿಸುತ್ತೇನೆ. ಶ್ರೀಮಾನ್ ಬಾಳಿಗಾ ಅವರು ನಮ್ಮನ್ನು ಅಗಲ ಈ ಸಭೆಯನ್ನು ಬಹಳ ಸಂಕಟ ಪರಿಸ್ಥಿತಿಯಲ್ಲಿ ಬಿಟ್ಟು ಹೋಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಶ್ರೀಮಾನ್ ಬಾಳಿಗಾ ಅವರು ಯಾವ ರೀತಿ ಇದ್ದರು, ಅವರ ವ್ಯಕ್ತಿಗುಣಗಳು ಏನು ಎನ್ನುವುದನ್ನೆರ್ಲಾ ಇದುವರೆಗೆ ಮಾತನಾಡಿದ ಮಾನ್ಯ ಸದಸ್ಯರುಗಳು ವರ್ಣಿಸಿದ್ದಾರೆ. ಈ ಸಮಯದಲ್ಲಿ ಕೆಲವು ವಿಚಾರಗಳನ್ನು ನೆನೆಸಿಕೊಂಡು ಹೇಳಬೇಕೆಂದು ಮಾಡಿದ್ದೇನೆ. ಅವರಲ್ಲಿ ಎದ್ದು ಕಾಣುತ್ತಿದ್ದ ಗುಣಗಳಲ್ಲಿ ಬುದ್ಧಿವಂತಿಕೆ ಮಾತು ಬೇರೆ, ಅವರು ಬುದ್ಧಿವಂತರಾಗಿದ್ದದು ನಿಜ, ಆ ಬುದ್ಧಿವಂತಿಕೆಯ ಜೊತೆಯಲ್ಲಿ ಮಾನವೀಯತೆಯು ಎದ್ದು ಕಾಣುತ್ತಿತ್ತು. ಅವರಲ್ಲಿ ಹೆಚ್ಚಿನ ಗುಣ, ಹಿರಿಮೆಯಗುಣ ಅವರಲ್ಲಿದ್ದ ಮಾನವೀಯತೆ ಇತ್ತು ಎಂದು ಹೇಳಿದರೆ ತಪ್ಪಾಗಲಾರದು. ಅವರು ಬಹಳ ಸೌಜನ್ಯದಿಂದ, ಒಳ್ಳೆಯ ಗುಣದಿಂದ, ನಮ್ಮಲ್ಲಿ ಯಾರು ಏನು ಎಂಥ ಆಕ್ಕೋಶದಿಂದ ಮಾತನಾಡಿದರೂ ಅದನ್ನ ಸಮಾಧಾನದಿಂದ ಕೇಳಿ, ಅದಕ್ಕೆ ಸರಿಯಾಗಿ ನಡೆಯುವಂತಹ ಒಂದು ದೊಡ್ಡ ಹಿರಿಮೆಯ ಗುಣ ಅವರಲ್ಲಿತ್ತು. 1967ನೇ ಇಸವಿಯ ಚುನಾವಣೆ ಆದ ಮೇಲೆ ಈ ಸಭೆಯಲ್ಲಿ ನಡೆದಂತಹ ಪ್ರಸಂಗಗಳಲ್ಲಿ ನನಗಾದರೂ ಅನಿಸುತ್ತದೆ, ಶ್ರೀಮಾನ್ ಬಾಳಿಗಾರವರು ಇಲ್ಲದಿದ್ದರೆ, ಇನ್ಯಾರಾದರೂ ಆಗಿದ್ದರೆ, ಆ ಸಂದರ್ಭದಲ್ಲಿ, ಸಭೆಯನ್ನು ಹತೋಟಿಗೆ ತರತಕ್ಕಂಥದ್ದು ಸ್ವಲ್ಪ ಕಷ್ಟವಾಗುತ್ತಿತ್ತು ಎಂದು ಕಾಣುತ್ತದೆ. ಶ್ರೀಮಾನ್ ಬಾಳಿಗಾರವರು ವಿದ್ಯೆಯ ಒಂದು ಗಣಿ ಎಂದು ಹೇಳಿದರೆ ತಪ್ಪಾಗಲಾರದು. ಅವರು ಯಾವುದಾದರೂ ಒಂದು ಲೇಖನ ಏನಾದರೂ ಬರೆಯಬೇಕಾದರೆ, ಸುಮಾರು ನೂರಾರು ಗ್ರಂಥಗಳನ್ನು ಓದಿ ಕರಗತ ಮಾಡಿಕೊಂಡು ಬರೆದು, ಅದರ ಜೊತೆಗೆ ನಮಗೆ ಕೂಡ ತೋರಿಸಿ, 'ನೋಡಿ ಇಂಥ ವಿಷಯ ಬಗೆದಿದ್ದೇನೆ' ಎಂದು ಹೇಳಿ, ಇತರರಿಗೂ ತಿಳಿಸುವ ಒಂದು ಗುಣ ಅವರಲ್ಲಿತ್ತು. ನಮ್ಮ ಸಭೆಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಅವರು ಎಲ್ಲರನ್ನೂ ಬಹಳ ಒಳ್ಳೆಯ ರೀತಿಯಿಂದ ನೋಡಿಕೊಂಡು ನಡೆಯುತ್ತಿದ್ದರು. ಅನೇಕ ಸಾರಿ ನಮಗೆ ಸ್ನೇಕರ್, ಏನಪ್ಪಾ, ಈ ರೀತಿ ಮಾಡತ್ತಾರೆ ಎಂದು ಕಾಣಬಹುದು, ಅಧಿಕಾರ ಪಕ್ಷದವರಿಗೆ, ವಿರೋಧ ಪಕ್ಷದಲ್ಲಿ ಬಹಳ ಲೀನಿಯಂಟ್ ಆಗಿದ್ದಾರೆ ಎನ್ನುವ ಭಾವನೆ ಬಂದರೂ, ಅವರು ಬಹಳ ಸುಲಲಿತವಾದ ರೀತಿಯಲ್ಲಿ ಚಾಕಚಕ್ಯತೆಯಿಂದ, ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು, ಒಳ್ಳೆಯ ಹೆಸರನ್ನು ತೆಗೆದುಕೊಂಡು ನಮ್ಮನ್ನು ಅಗಲಹೋಗಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ ಹಾಗೆ, ನಮ್ಮ ಮುಖ್ಯಮಂತ್ರಿಯವರು ಹೇಳಿದ ಹಾಗೆ, ಅವರ ಸ್ಥಾನವನ್ನು ತುಂಬುವುದು ಕಷ್ಟ. ಆದ್ದರಿಂದ ಮುಂದೆ ಈ ಸ್ಥಾನಕ್ಕೆ ಯಾರು ಬಂದರೂ ಒಂದನ್ನು ಮಾತ್ರ ಅವರು ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ, ಬರೇ ರೂಲ್ಸ್ ಇದೆ ಕಾನೂನು ಇದೆ, ಅದರ ಚೌಕಟ್ಟಿನಲ್ಲಿ ನಡೆದುಕೊಂಡು ಹೋಗುತ್ತೇವೆ ಎಂದರೆ ಬಹಳ ಕಷ್ಟ. ಈಗಿರತಕ್ಕಂತಹ ಪರಿಸ್ಥಿತಿಯಲ್ಲಿ, ಹಿಂದೂಸ್ಥಾನದಲ್ಲಿ, ಸಭಾಪತಿಗಳು ಯಾರು ಆಗಿರುತ್ತಾರೋ, ಅವರ ಮೇಲೆ ಪ್ರಜಾಪ್ರಭುತ್ವ ಬೆಳೆಯತಕ್ಕಂಥದ್ದು ಹೆಚ್ಚಾಗಿ ಅವಲಂಬನೆ ಮಾಡಿಕೊಂಡಿರುತ್ತದೆ. ಆದ್ದರಿಂದ, ಅವರು ಶ್ರೀಮಾನ್ ಬಾಳಿಗಾರವರಿಗಿದ್ದಂತಹ ತಾಳ್ಮೆ, ಸೌಜನ್ಯತೆ ಮತ್ತು ಸಹಕಾರ ಮನೋಭಾವನೆಯನ್ನು ಬೆಳೆಸಿಕೊಂಡು ಬರಬೇಕು. ಒಂದು ಸಾರಿ ಚುನಾವಣೆ ಆದ ಮೇಲೆ, ಅವರು, ನಾನು ಯಾವ ಪಕ್ಷಕ್ಕೂ ಸೇರಿದವನಲ್ಲ ಎಂದು ತಿಳಿಯಬೇಕು. ಅಷ್ಟಲ್ಲದೆ, ಲೋಕಸಭೆಯ ನಾಯಕರು ಹಾಕಿರತಕ್ಕಂತಹ ಒಂದು ನೀತಿ ಏನಿದೆಯೆಂದರೆ, ಯಾವ ದಿವಸ ಅವರು ಚುನಾಯಿಸಿ ಬರುತ್ತಾರೋ, ಅಂದಿನಿಂದ ಅವರು ಯಾವ ಪಕ್ಷಕ್ಕೆ ಸೇರಿರಲಿ, ಅದಕ್ಕೆ ರಾಜೀನಾಮೆ ಕೊಟ್ಟು ನಾನು ಯಾವ ಪಕ್ಷಕ್ಕೂ ಸೇರಿಲ್ಲ ಎಂದು ಪ್ರಕಟಿಸಿ, ಸರ್ವರನ್ನೂ ಸಮಾನತೆಯ ದೃಷ್ಟಿಯಿಂದ ನೋಡಿಕೊಳ್ಳಬೇಕು. ಶ್ರೀಮಾನ್ ಬಾಳಿಗಾರವರನ್ನು ನಾವು ಕಳೆದುಕೊಂಡರೂ ಅವರ ಮಾರ್ಗದರ್ಶನವನ್ನು ಬಿಡಬಾರದು. ಶ್ರೀಮಾನ್ ಬಾಳಿಗಾರವರು ಕಾಕಿರೆ ಬಿದ್ದಮೇಲೆ, ಅವರು ಪುನಃ ಬರುವುದಿಲ್ಲವೆಂದು ನಾವು ತಿಳಿದುಕೊಳ್ಳಲಿಲ್ಲ. ಹುಟ್ಟಿದ ಮೇಲೆ ಮನುಷ್ಯನು ಒಮ್ಮೆ ಸಾಯಲೇಬೇಕು. ಆದರೂ, ಅವರು ಏನು ಮಾರ್ಗದರ್ಶನವನ್ನು ಹಾಕಿ ಹೋಗಿದ್ದಾರೋ, ಅದನ್ನು ನಾವು ಸದಾ ಜ್ಞಾಪಕದಲ್ಲಿಟ್ಟುಕೊಂಡು ನಡೆದುಕೊಳ್ಳಬೇಕೆಂಬ ಆಶಯವನ್ನು ವ್ಯಕ್ತಪಡಿಸಿ, ಈ ಮನೆಯ ಮಾನ್ಯ ನಾಯಕರು ಸೂಚಿಸಿದಂತಹ ನಿರ್ಣಯಕ್ಕೆ ನಾನು ಅನುಮೋದನೆಯನ್ನು ಕೊಟ್ಟು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri P. F. D'MELLOW (Nominated).—Mr. Deputy Speaker Sir, I deem it a great honour to be allowed to associate myself with the sentiments and tributes paid by the Leader of the House and the other distinguished speakers who preceded me. I claim it my proud privilege, representing as I do a very, very small voice in this august House, to be able to add my tribute on this occasion.

Sir, the late Mr. Baliga is undoubtedly one of the giants among the architects that India has so far produced in laying the foundations for a true and lasting parliamentary democracy. For my part, I only wish to add one point to his great contribution, and that is, his rulings, conventions and the many bits of advice that he gave us every year, tending to build what, to my mind, represents the highest and truest parliamentary democracy. It is an insurance that minority opinion will always be heard with every consideration and patience in this House and throughout the country so long as parliamentary democracy remains with us.

A great gentleman has left us and it is not only this House but the country and the world is poorer by his passing.

ಶ್ರೀ ಎಸ್. ಆರ್. ಕಂಠಿ (ಹನುಗುಂದ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬಾಳಿಗಾರವರು ನನಗೆ ಪರಮ ಮಿತ್ರರೂ ಹೌದು, ನನ್ನ ಹಿರಿಯರೂ ಹೌದು. ಅವರು ನನ್ನ ಜೊತೆಯಿಲ್ಲಿ ಹಲವಾರು ಸಮಯವಿದ್ದರು. ಅವರು ನನ್ನನ್ನು ಮಿತ್ರರು ಎನ್ನುವ ಭಾವನೆಯಿಂದ ನೋಡುತ್ತಿದ್ದರು. ರಾಜ್ಯದ ಪುನರಚನೆಯಾದ ಮೇಲೆ, ಅವರು ನನ್ನ ತರುವಾಯ ಅಧ್ಯಕ್ಷರಾಗಿ ಬಂದರು. ಅವರು ಮಹಾ ಕೆಲಸಗಳನ್ನು ಮಾಡಿದ್ದಾರೆ ಎಂದು ಮೆಚ್ಚಿಗೆಯಿಂದ ಹೇಳಬೇಕು ನನಗೆ ಅಧ್ಯಕ್ಷತೆ ಎಂದರೆ ಏನು, ಅಧ್ಯಕ್ಷರು ಹೇಗಿರಬೇಕು ಎನ್ನುವ ಅನುಭವ ಇರುವುದರಿಂದ ಅವರು ಮಾಡಿದ ಕೆಲಸದ ಹೆಚ್ಚಳ ಗೊತ್ತಿದೆ. ಇದನ್ನು ನಾನು ಬಹಳ ಹೆಮ್ಮೆಯಿಂದ ಹೇಳಬೇಕಾಗಿದೆ. ನಾನು ಅವರಿಗೆ ಹೇಳುತ್ತಿದ್ದೆ, ನನ್ನ ಕಾಲದಲ್ಲಿ ನನಗೆ ಕೆಲವು ಕಷ್ಟಗಳು ಇದ್ದವು, ಆದರೆ ನೀವು ಅನುಭವಿಸಿದಂತಹ ಕಷ್ಟ ನಾನು ಅನುಭವಿಸಿರಲಿಲ್ಲ ಮತ್ತು ನಿಮ್ಮ ಚಾಕಚಕ್ಯತೆಯನ್ನು ನೋಡಿದರೆ, ನಿಮ್ಮ ಆದರ್ಶಗಳನ್ನು ನಮ್ಮ ಮೈಸೂರು ರಾಜ್ಯದಲ್ಲಿ ಮುಂದೆ ಬರುವಂತಹ ಎಲ್ಲಾ ಅಧ್ಯಕ್ಷರುಗಳೂ ತಮ್ಮ ಮುಂದಿಟ್ಟುಕೊಂಡು ನಡೆಯಬೇಕು, ಎಂದು. ಅವರು ಅದಕ್ಕೆ ಹೇಳುತ್ತಿದ್ದರು, ಇಲ್ಲ ನೀವು ಎಲ್ಲಾ ಅತಿಶಯೋಕ್ತಿಯಾಗಿ ಹೇಳುತ್ತಿದ್ದೀರಿ ; ನೀವೇ ನನ್ನ ಗುರು, ಎಂದು ಅವರು ನನ್ನ ಮೇಲಿನ ವಿಶ್ವಾಸದಿಂದ ಹೇಳುತ್ತಿದ್ದರು. ಅವರು ಎಲ್ಲಾ ರೂಲ್ಸ್ ಅಂಡ್ ರೆಗ್ಯೂಲೇಷನ್‌ಗಳನ್ನು ಅರಗಿಸಿಕೊಂಡು ಎಲ್ಲರನ್ನೂ ಚೆನ್ನಾಗಿ ನೋಡಿಕೊಂಡು, ಪ್ರತಿಯೊಬ್ಬ ಸದಸ್ಯನನ್ನು, ಅವನು ತನ್ನ ಮಿತ್ರ, ಅವನಿಗೆ ಸಹಾಯ ಮಾಡಬೇಕು, ಮತ್ತು ಮಾರ್ಗದರ್ಶನವನ್ನು ಮಾಡಬೇಕೆಂಬ ಭಾವನೆಯಿಂದ ನಡೆಯುತ್ತಿದ್ದರು. ಈ ಸಭೆಯು ಒಂದು ಧರ್ಮದ ಸಭೆಯಲ್ಲ, ಇದು ಒಂದು ರಾಜಕೀಯ ಸಭೆ. ಇದರಲ್ಲಿ ಅನೇಕ ಸದಸ್ಯರು ಇರುತ್ತಾರೆ. ಅವರಿವರಲ್ಲಿ ಒಂದೊಂದು ವಿಚಾರವಿರುತ್ತದೆ. ಅವರ ವಿಚಾರ ಮತ್ತು ಭಾವನೆಯನ್ನು ಸರಿಯಾದ ರೀತಿಯಲ್ಲಿ ನೋಡಿಕೊಂಡು, ಯಾರಿಗೂ ನೋವಾಗದಂತೆ ವರ್ತಿಸುವುದೇ ಅಧ್ಯಕ್ಷರ ಮುಖ್ಯ ಕರ್ತವ್ಯ. ಆ ಕರ್ತವ್ಯವನ್ನು ಅವರು ಬಹಳ ಚೆನ್ನಾಗಿ ಮಾಡಿದ್ದಾರೆ. ಹಲಕೆಲವು ಸಮಯದಲ್ಲಿ, ಈ ಸಭೆಯಲ್ಲಿ ಕೆಲವು ಬಿಸಿ ವಾತಾವರಣವಿದ್ದ ಕಾಲದಲ್ಲಿ ಶ್ರೀಮಾನ್ ಬಾಳಿಗಾರವರು ಯಾವ ರೀತಿಯಲ್ಲಿ ಇದನ್ನು ಸಾಗಿಸಿಕೊಂಡು ಹೋಗುತ್ತಾರೆ ಎನ್ನುವ ಭಯ ನಮಗೆ ಇತ್ತು. ಆದರೆ, ಅವರು ಅವೆಲ್ಲವನ್ನೂ ಸುಲಲಿತವಾಗಿ ಸಾಗಿಸಿಕೊಂಡು, ಎಲ್ಲರಿಗೂ ಸಮಾಧಾನವಾಗುವಂತೆ ಕೆಲಸ ಮಾಡಿದ್ದಾರೆ. ಈಗಾಗಲೇ, ನನ್ನ ಮಿತ್ರರು ಹೇಳಿದಂತೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿದಂತೆ, ನಮ್ಮ ರಾಷ್ಟ್ರದ ಕಾಂಗ್ರೆಸ್ಸಿನ ನಾಯಕರು ಹೇಳಿದಂತೆ, ಇವತ್ತಿನ ದಿವಸ ನಾವು, ಅವರು ಮಾಡಿದಂತೆ ಕೆಲಸವನ್ನು, ದಕ್ಷತೆಯಿಂದ, ಒಂದು ಚೌಕಟ್ಟಿನೊಳಗೆ ಮಾಡಿಕೊಂಡು ಹೋಗುವುದಕ್ಕೆ ಆಗುತ್ತದೆಯೋ, ಇಲ್ಲವೋ ಎನ್ನುವ ಸಮಸ್ಯೆ ಬರುತ್ತಿದೆ. ಅವರಲ್ಲಿರುವಂತೆ, ಶಾಂತ ಗುಣ, ನಮ್ರತೆ, ಸೌಮ್ಯತೆ, ಸೌಜನ್ಯತೆ ಪರಸ್ಪರ ತಿಳಿವಳಿಕೆ ಇವೆಲ್ಲವೂ ನಮ್ಮೆಲ್ಲರಲ್ಲಿಯೂ ಬರಬೇಕು ಮತ್ತು ಮುಂದೆ ಯಾರು ಅಧ್ಯಕ್ಷರಾಗಿ ಬಂದರೂ, ಅವರು ಈ ಗುಣಗಳನ್ನು ಪಾಲಿಸಿಕೊಂಡು ಹೋಗಬೇಕಾಗುತ್ತದೆ. ಅವರು ಇವತ್ತು ನಮ್ಮೆಲ್ಲರನ್ನೂ ಅಗಲಿ ಹೋಗಿದ್ದಾರೆ; ನಾವು

ದುಃಖದಲ್ಲದ್ದೇವೆ. ನಾವೆಲ್ಲರೂ ಅವರ ಆದರ್ಶಗಳನ್ನು ಮುಂದಿಟ್ಟುಕೊಂಡು ನಡೆಯಬೇಕು ಮತ್ತು ಮುಂದೆ ಬರುವಂತಹ ಅಧ್ಯಕ್ಷರೂ ಆ ರೀತಿ ಮಾಡುತ್ತಾರೆ ಎನ್ನುವ ಭಾವನೆಯನ್ನು ತಾಳಿ, ಈ ಸೂಚನೆಯನ್ನು ನಾವು ಅನುಮೋದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

1-30 P.M.

† ಶ್ರಿ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಅಧ್ಯಕ್ಷರಾಗಿದ್ದ ದಿವಂಗತ ಶ್ರೀ ಪ್ಯೆಕುಂಠ ಬಾಳಿಗಾ ಅವರ ನಿಧನದ ಬಗ್ಗೆ ಮಂಡಿಸಿರುವ ಸಂತಾಪಸೂಚಕ ನಿರ್ಣಯವನ್ನು ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಹೇಳಲಚ್ಛಿಸುತ್ತೇನೆ.

ಶ್ರೀ ಬಾಳಿಗಾ ಅವರು ಕಾನೂನಿನ ಪಂಡಿತರಾಗಿದ್ದರು. ಅವರು ಈ ಸಭೆಯ ಅಧ್ಯಕ್ಷರಾಡ ಮೇರೆ ಸಾಮಾನ್ಯವಾಗಿ ಪ್ರಜಾಪ್ರಭುತ್ವದ ಇತಿಹಾಸ ಮತ್ತು ಅದು ನಡೆದು ಬಂದ ದಾರಿ ಈ ಎಲ್ಲಾ ವಿಷಯಗಳ ಬಗ್ಗೆ ಅಮೂರಾಗ್ರವಾಗಿ ಅಧ್ಯಯನ ನಡೆಸಿದರು. ಪಾರ್ಲಿಮೆಂಟ್ ನಡೆಸಿ ಕೊಂಡು ಹೋಗುವ ಬಗ್ಗೆ, ವಿಧಾನಸಭೆಗಳು ಮತ್ತು ವಿಧಾನ ಪರಿಷತ್ತುಗಳು ನಡೆಯುವ ಬಗ್ಗೆ, ಸದಸ್ಯರು ಮತ್ತು ಸರ್ಕಾರದವರು ಅಲ್ಲಿ ವರ್ತಿಸುವ ಬಗೆಗೆ ಇತ್ಯಾದಿ ಇತ್ಯಾದಿಯಾಗಿ ಇನ್ನೂ ಅನೇಕ ಪ್ರಕರಣಗಳ ಬಗ್ಗೆ ಅವರು ವಿವರವಾಗಿ ಅಧ್ಯಯನ ನಡಸಿದರು. ಅವರ ನಿಧನದಿಂದ ಒಂದು ಜ್ಞಾನರಾಶಿ ನಷ್ಟವಾಯಿತೆಂದು ನನಗನ್ನಿಸುತ್ತದೆ. ಅವರಷ್ಟು ವಿವೇಚನೆಯಿಂದ, ದಕ್ಷತೆಯಿಂದ ಈ ಸಭೆಯ ಕಾರ್ಯ ಕಲಾಪಗಳನ್ನು ನಡೆಸಿಕೊಂಡು ಹೋಗುವುದು ನುಲಭವೇನೂ ಇಲ್ಲ. ಅವರು ಅವರ ಕೆಲಸಗಳನ್ನು ಮಾನ್ಯ ಶ್ರೀ ನಿಜಲಿಂಗಪ್ಪನವರು ಹೇಳಿದ ಹಾಗೆ ನಿಷ್ಠೆಯಿಂದ, ದಕ್ಷತೆಯಿಂದ ನಡಸಿಕೊಂಡು ಹೋಗುತ್ತಿದ್ದರು. ಅವರ ಅಕಾಲ ನಿಧನದಿಂದ ನಮಗೆ ತುಂಬಲಾರದಷ್ಟು ನಷ್ಟ ವಾಗಿದೆ. ಅದಕ್ಕಾಗಿ ನಮಗೆ ವಿಶೇಷವಾಗಿ ದುಃಖವಾಗುತ್ತದೆ ಇನ್ನೊಂದು ಮಾತು, ಅವರ ಮತ್ತು ನನ್ನ ಸಂಬಂಧದಲ್ಲಿ ಹೇಳಬೇಕೆಂದರೆ, ಅವರು ಈ ಸಭೆಯ ಅಧ್ಯಕ್ಷರಾದುದು 1962 ರಲ್ಲಿ ಎಂದು ನನಗೆ ಕಾಣುತ್ತದೆ. ಆಗ ಒಂದು ಸಾರಿ ವಿರೋಧಪಕ್ಷದವರ ಲೆಂಜಿಗೆ ಬಂದರು. ಅಲ್ಲಿ ಮಾನ್ಯ ಶ್ರೀ ಮುಕ್ಕಣ್ಣಪ್ಪನವರು ಮತ್ತು ನಾನು ಕುಳಿತಿದ್ದ ಸಂದರ್ಭದಲ್ಲಿ ನಮ್ಮಿಬ್ಬರ ಮಧ್ಯೆ ಅವರು ಕುಳಿತು ನಮ್ಮ ಹೆಗಲಮೇಲೆ ಕೈಹಾಕಿಕೊಂಡು ನಿಮ್ಮಿಬ್ಬರನ್ನೂ ಪಳಗಿಸಬೇಕಾಗಿದೆ, ಇನ್ನೂ ಆ ಪ್ರಯತ್ನದಲ್ಲಯೇ ನಾನು ಇದ್ದೇನೆಂದು ಹೇಳಿದ್ದು ಉಂಟು. ನಾನು ವಿರೋಧ ಪಕ್ಷವಲ್ಲಿದ್ದ ಕಾರಣವಿಂದಲೂ, ಅನೇಕವೇಳೆ ಸರ್ಕಾರವನ್ನು ಉಗ್ರವಾಗಿ ಪ್ರತಿಭಟಿಸಿದ ಸಂದರ್ಭ ದಲ್ಲಿ ವೈಯಕ್ತಿಕಾರಣ ಕೂಡ ಸಭಾಧ್ಯಕ್ಷರ ವಕ್ರದೃಷ್ಟಿಗೆ ಗುರಿಯಾದುದೂ ಉಂಟು. ಎರಡು ಬಾರಿ ಈ ಸಭೆಯು ಶಿಸ್ತಿನ ದಂಡಕ್ಕೆ ನಾನು ಗುರಿಯಾಗಿದ್ದೆ. ಹೊರಗೆ ಹೋಗುವಂಥಾದ್ದು ಇತ್ಯಾದಿ ಅನೇಕ ಸಾರಿ ಆಗಿದೆ. ಕೆಲವು ಸಂದರ್ಭಗಳನ್ನು ಯಾವತ್ತೂ ನಾನು ಕಹಿಯಾಗಿ ಅಥವಾ ವೈಷಮ್ಯ ವಾಗಿ ತೆಗೆದುಕೊಂಡವನಲ್ಲ. ಇತ್ತೀಚೆಗೆ ತಮಗೆಲ್ಲರಿಗೂ ಗೊತ್ತಾಗಿರಬಹುದು. ಅದೇನೆಂದರೆ ನನ್ನ ಮತ್ತು ಅವರ ಪ್ರೇಮ ತೀರಾ ಬೆಳೆದು ಬಂದಿತ್ತು. ಆದರೆ ದುರಾದೃಷ್ಟದಿಂದ ಅವರ ಪಾರ್ಥಿವ ಶರೀರವನ್ನು ನಾನು ನೋಡುವುದಕ್ಕಾಗಲಿಲ್ಲ. ಆ ಸಂದರ್ಭದಲ್ಲಿ ನಾನು ದೆಹಲಿಗೆ ಪ್ರಯಾಣ ಹೊರಟಿದೆ. ಅದಕ್ಕಾಗಿ ನಾನು ಮತ್ತಷ್ಟು ದುಃಖಿತನಾಗಿದ್ದೇನೆ. ಅನೇಕ ಮಾನ್ಯ ಸದಸ್ಯರು ಅವರ ನಿಧನದ ಬಗ್ಗೆ ಶ್ರದ್ಧಾಂಜಲಿಯನ್ನು ಅರ್ಪಿಸಿರುವ ಹಾಗೆ, ನಾನು ನನ್ನ ಪರವಾಗಿ ಹಾಗೂ ನನ್ನ ಮಿತ್ರರ ಪರವಾಗಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯ ಮಂತ್ರಿಗಳು ಏನೊಂದು ನಿರ್ಣಯವನ್ನು ಇಂದು ನಮ್ಮ ಮುಂದೆ ಇಟ್ಟಿದ್ದಾರೋ ಅದನ್ನು ನಾನು ಅನುಮೋದಿಸುತ್ತಾ, ಒಂದೆರಡು ಮಾತುಗಳನ್ನು ಆಡಬೇಕೆಂದು ಇಚ್ಛಿಸುತ್ತೇನೆ. ಸಭಾಧ್ಯಕ್ಷರಾಗಿದ್ದ ದಿವಂಗತ ಬಾಳಿಗಾರವರ ಪರಿಚಯವಾಗಿ ಒಂದೂವರೆ ವರ್ಷವಾದರೂ ಅವರ ಸಂಪರ್ಕ ನನಗೆ ಹಿಂದಿ ನಿಂದಲೂ ಇತ್ತು. ಅವರು ಮೊದಲು ಕಾರ್ಮಿಕ ಮಂತ್ರಿಗಳಾಗಿದ್ದರು. ಆಗ ಅವರೊಡನೆ ಅನೇಕಸಾರಿ ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ, ಹಾಗೂ ಇತರರಿಗೂ ಸಂಬಂಧಪಟ್ಟಹಾಗೆ ಮತ್ತು ದೇಶಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಚರ್ಚೆಮಾಡಿದ್ದೂ ಉಂಟು. ನನಗೆ ಈ ಸಂದ ರ್ಭದಲ್ಲಿ ಒಂದು ವಿಷಯ ಪ್ರಾಸ್ತಾವಿಕಕ್ಕೆ ಬರುತ್ತಿದೆ, ಅವರಷ್ಟು ಆಳವಾದ ಒಂದು ದೃಷ್ಟಿ, ಮತ್ತು ಒಂದು ಮಾನವೀಯತೆ ದೃಷ್ಟಿಯನ್ನು ಇಟ್ಟುಕೊಂಡಿರತಕ್ಕದ್ದು ಇತರ ಅನೇಕ ಮಂತ್ರಿಗಳಲ್ಲಿ ಹೆಚ್ಚು ಕಂಡು ಬರಲಿಲ್ಲ. ಅವನ್ನು ಇನ್ನು ಮುಂದೆ ಕಾಣಬೇಕಾಗಿದೆ. ಅವರಲ್ಲಿ ನಾನು ಯಾವ ವಿಷಯ ಮಾತನಾಡಿದರೂ ನನಗೆ ತಿಳುವಳಿಕೆ ಕೊಟ್ಟು, ನಮ್ಮನ್ನು ಒಪ್ಪಿಸಿ ಕಳುಹಿಸುವಷ್ಟು ಒಂದು ದೊಡ್ಡ ಗುಣ ಅವರಲ್ಲಿತ್ತು. ಹಿಂದೂಸ್ತಾನ್ ಏರ್‌ಕ್ರಾಫ್ಟ್ ಕೆಲಸಗಾರರ ಒಂದು ದೊಡ್ಡ ಮುಷ್ಕರ ನಡೆ

(ಶ್ರೀ ಎಂ. ಎಸ್. ಕೃಷ್ಣನ್)

ದಾಗ ನಾನು ಸುಮಾರು 50—60 ಕೆಲಸಗಾರರೊಡನೆ ಅವರ ಮನೆಗೆ ಹೋದಾಗ, ಏಕೆ ಈ ಬಸಿಲಿನಲ್ಲಿ ಬಂದಿರಿ, ಆಫೀಸಿಗೆ ಬಾದಿದ್ದರೆ ಅದನ್ನು ಅಲ್ಲಿ ಚರ್ಚೆಮಾಡಿ ಇತ್ಯರ್ಥ ಮಾಡಬಹುದಿತ್ತು. ನನ್ನನ್ನು ಇಲ್ಲಿಯೇ ಬಂದು ನೋಡಬೇಕೇ ಎಂದು ಕೇಳಿದರು. ಆಗ ನಾನು ತಮ್ಮ ಹತ್ತಿರಜಾಗ್ರತೆಯಾಗಿ ಬರಬೇಕಾದ ಸಂದರ್ಭ ಬಂದಿದ್ದರಿಂದ ಬಂದೆವು ಎಂಬುದಾಗಿ ಹೇಳಿದೆ ಅನಂತರ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಚರ್ಚೆಮಾಡಿ, ತಿಂಗಳಾನುಗಟ್ಟಲೆ ಇತ್ಯರ್ಥಮಾಡುವುದಕ್ಕೆ ಸಾಧ್ಯವಾಗದೇ ಇದ್ದುದನ್ನು ಕೇವಲ ಸ್ವಲ್ಪದಿವಸಗಳೊಳಗೇ ಬಗೆಹರಿಸಿದರು. ಅವರು ತಂದೆಯೋಪಾದಿಯಲ್ಲಿ ನಮ್ಮನ್ನು ಕಂಡರು. ಕೊನೆಯಲ್ಲಿ ತಿಂಡಿ, ಊಟ ನಮಗೆ ಕೊಟ್ಟು ನಮ್ಮನ್ನು ಕಳುಹಿಸಿದರು ಇಂತಹ ಆತ್ಮೀಯತೆಯನ್ನು ದಿವಂಗತ ವಾನ್ಯ ಶ್ರೀ ಬಾಳಿಗಾರವರಲ್ಲಿ ಂಡಿದ್ದೇವೆ. ಅಂತಹ ವರನ್ನು ನಾವು ಕಳೆದುಕೊಂಡಿದ್ದುದರಿಂದ ನಮಗೆ ಬಹಳ ದುಃಖವಾಗುತ್ತದೆ.

ಇನ್ನೊಂದು ಸಂದರ್ಭದಲ್ಲಿ ಅವರು ಈ ಸಭಾಧ್ಯಕ್ಷರಾಗಿದ್ದಾಗ ನಮ್ಮ ವಿರೋಧಪಕ್ಷದವರು ನೀವು ಸಭಾಧ್ಯಕ್ಷರು ಆಗಿರುವುದು ಸಂತೋಷ. ವಿರೋಧಪಕ್ಷದವರನ್ನು ಸರಿಸಮಾನವಾಗಿ ಕಾಣಬೇಕು ಎಂದು ನಮ್ಮ ಪಕ್ಷದವರಲ್ಲಿ ಅನೇಕರು ಹೇಳಿದ್ದರು. ಅದಕ್ಕೆ ಅವರು ಹೇಳಿದ ಮಾತನ್ನು ಅವರ ಮಾತಿನಲ್ಲಿಯೇ ಹೇಳಿದರೆ ಒಳ್ಳೆಯದು. ಅದು ಹೀಗಿದೆ :

> "I was asked to keep in mind that the Government party was in majority and that I must safeguard the interests of the Opposition and a little leniency be shown and more scope given to them. Certainly, the principle of democracy is that the minority must have its say and it is said that the majority will have its way. But, in between we must reconcile and in the process of reconciliation, the Speaker is there to help and to hold the scale, not the scale to weigh gold but the finest scale necessary to weigh a more precious thing than gold. That means, I must be impartial. I assure that it will be my sincere endeavour not only to be impartial so far as individual is concerned, but demonstrate that I am impartial and onvey the impression not noly to the members but to the country and let us know that there is the country that is watching us and let us also feel that we are satisfying our own conscience that we are trying to do the best in the service of the country."

ಕಳೆದ ಒಂದೂವರೆ ವರ್ಷಗಳಲ್ಲಿ ಅನೇಕಬಾರಿ ನಮಗೂ ಅವರಿಗೂ ಸ್ವಲ್ಪಮಟ್ಟಿಗೆ ಪಾಠ್ಯದ್ವನಡೆದಿರಬಹುದು. ಆದರೂ ಸಹ ಅವರು ಮೂಲಭೂತವಾಗಿ ಪ್ರಜಾಪ್ರಭುತ್ವ ತತ್ವವನ್ನು ಎತ್ತಿ ಹಿಡಿದು ವಿರೋಧಪಕ್ಷದವರಿಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶಕೊಟ್ಟು, ಅಂತಹ ಒಳ್ಳೆಯ ಒಂದು ಪರಂಪರೆಯನ್ನು ನೃಷ್ಟಿಸಿದರು. ಆದರಂತೆ ಮುಂದೆಯೂ ತೆಗೆದುಕೊಂಡು ಹೋಗುವ ಜವಾಬ್ದಾರಿ ನಿಮ್ಮಮೇಲೆ ಇದೆಯೆಂದು ಹೇಳಿದರೆ ತಪ್ಪಾಗುವುದಿಲ್ಲ. ಅವರು ಹೇಳಿರುವ ಮಾತಿನಲ್ಲಿ ಎಷ್ಟೊಂದು ಉದಾತ್ತವಾದ ದೇಶಭಕ್ತಿ, ನಿ ಇದೆಯೆಂಬುದು ಕೋರಿಸುತ್ತದೆ. ನಿಷ್ಪಾವಂತ ದೇಶಭಕ್ತರಲ್ಲಿ ಅವರ ಅಗ್ರಗಣ್ಯರು. ರಾಜಕೀಯ ಭಿನ್ನಾಭಿಪ್ರಾಯಗಳು ಹಾಗಿರಲಿ, ಅದು ಬೇರೆ. ಮೂಲಭೂತವಾಗಿ ಅವರಿಗೆ ಈ ದೇಶದ ಬಗ್ಗೆ ಮತ್ತು ಕರ್ನಾಟಕದ ಬಗ್ಗೆ ಅಚಲವಾದ ವಿಶ್ವಾಸ ಇತ್ತು. ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ ಹಾಗೆ ಅನೇಕ ಸಂದರ್ಭಗಳಲ್ಲಿ ಅವರು ನಮಗೆ ಬಂದರಿನ ವಿಷಯದಲ್ಲಿ, ಕೈಗಾರಿಕೆಗಳ ವಿಷಯದಲ್ಲಿ, ನೀರಾವರಿಯ ವಿಷಯದಲ್ಲಿ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡುತ್ತಿದ್ದರು. ಇಂಥವರನ್ನು ನಾವು ಕಳೆದುಕೊಂಡಿರುವುದರಿಂದ ನಮಗೆ ಹೆಚ್ಚಿನ ದುಃಖವಾಗುತ್ತದೆ. ನನ್ನ ಸ್ನೇಹಿತರು ಹೇಳಿದ ಹಾಗೆ ಈ ಸಭೆಯ ಅಧ್ಯಕ್ಷರ ಸ್ಥಾನದಲ್ಲಿ ಶ್ರೀಮಾನ್ ದಿವಂಗತ ಬಾಳಿಗಾರವರಂತಹ ಮೇಧಾವಿಗಳನ್ನೂ, ಮುತ್ಸದ್ದಿವಂತರನ್ನೂ ಯಾರನ್ನೂ ನೋಡಲಿಲ್ಲವೆಂದು ಕಾಣುತ್ತದೆ. ಅವರು ಈ ಸಭೆಯ ಅಧ್ಯಕ್ಷ ಪೀಠವನ್ನು ಅಲಂಕರಿಸಿದಂತಹ ಕಾಲದಲ್ಲಿ ಕೊಟ್ಟಂತಹ ರೂಲಿಂಗ್‌ಗಳನ್ನು ಗಮನಕ್ಕೆ ತೆಗೆದುಕೊಂಡರೆ ಅಂಥಹ ಮೇಧಾವಿ

ಗಳು ಬೇರೆ ಯಾರಾದರೂ ಇದ್ದಾರೆಯೋ, ಇಲ್ಲವೋ ಎನ್ನುವ ಸಂಶಯವುಂಟಾಗುತ್ತದೆ. ಈ ಸಂದರ್ಭದಲ್ಲಿ ನನಗೆ ಒಂದು ಅರಬ್ಬೀ ಕಥೆಯು ಜ್ಞಾಪಕಕ್ಕೆ ಬರುತ್ತದೆ. ಅದು ಈ ರೀತಿ ಇದೆ.

"He who knows not and knows not he knows not; He is a fool—shun him.

"He who knows not and knows he knows not; he is simple—Teach him.

"He who knows and knows not he knows; he is asleep—wake him.

"He who knows and knows he knows; he is wise—follow him."

ಇದರಲ್ಲಿ ಕಡೆಯದು ಪೂರ್ತಿಯಾಗಿ ಅವರಿಗೆ ಅನ್ವಯಿಸುತ್ತದೆ ಎಂದು ನನ್ನ ಅಭಿಪ್ರಾಯ. ಇಷ್ಟು ಮಾತ್ರ ಹೇಳಿ ಅವರು ನಮಗೆ ಹಾಕಿಕೊಟ್ಟಿರತಕ್ಕಂಥ ಹೆದ್ದಾರಿಯಲ್ಲಿ ನಾವು ಮುನ್ನಡೆಯಬೇಕು ಎಂದು ಹೇಳಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ಜ್ಯಾಲನಯ್ಯ (ಹಾಸನ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಸಭೆಯು ನಾಯಕರು ದಿವಂಗತ ಶ್ರೀ ವೈಕುಂಠಬಾಳಿಗಾ ಅವರ ನಿಧನದ ಬಗ್ಗೆ ಒಂದು ಸಂತಾಪ ಸೂಚನಾ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಿದ್ದು ಅದನ್ನು ನಮ್ಮ ವಿರೋಧ ಪಕ್ಷದ ನಾಯಕರು ಸಮರ್ಥಿಸಿದ್ದಾರೆ. ಆದರಂತೆ ನಾನೂ ಕೂಡ ಈ ನಿರ್ಣಯವನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಈ ಜನ ನಾನು ಈ ಸಭೆಗೆ ಬರಬೇಕಾದರೆ ಶ್ರೀಮಾನ್ ಬಾಳಿಗಾ ಅವರು ಇಲ್ಲದ ಈ ಸಭೆ ನಿಜವಾಗಿಯೂ ಒಂದು ಸಭೆಯೇ ಎನ್ನುವ ಒಂದು ಮನೋವ್ಯಥೆ ನಮ್ಮ ಮನಸ್ಸಿನಲ್ಲಿ ಮೂಡಿಬರುತ್ತದೆ. ಅವರು ಒಳ್ಳೆಯ ಮೇಧಾವಿ; ಧೀಮಂತ; ಧರ್ಮ, ನ್ಯಾಯ, ಕಾನೂನು ಇವುಗಳನ್ನು ಚೆನ್ನಾಗಿ ಓದಿ ಆಳವಾಗಿ ಅಭ್ಯಾಸ ಮಾಡಿ ತಿಳಿದುಕೊಂಡು ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಅವರು ನ್ಯಾಯಧರ್ಮಗಳ ಧರ್ಮದರ್ಶಿಗಳಾಗಿದ್ದರು. ಅಂಥಾ ಮಹಾ ಮೇಧಾವಿ ನಮ್ಮಲ್ಲಿ ಇಲ್ಲವಲ್ಲ ಎಂದು ನಮ್ಮ ಮನಸ್ಸಿಗೆ ಬಹಳ ದುಃಖ ತುಂಬಿ ಬರುತ್ತಿದೆ. ನಮ್ಮ ದೇಶದ ಕಲ್ಯಾಣಕ್ಕೋಸ್ಕರ, ನಮ್ಮ ಜನತೆಯ ಏಳಿಗೆಗೋಸ್ಕರ ದುಡಿದಂತಹ ವ್ಯಕ್ತಿಗಳಲ್ಲಿ ಅವರೂ ಒಬ್ಬರು ಎಂದು ನಾವು ಧಾರಾಳವಾಗಿ ಹೇಳಬಹುದು. ಅವರು ಪ್ರಪಂಚದ ಪ್ರಗತಿಗೋಸ್ಕರ ಒಂದು ಯೋಜನೆಯನ್ನು ತಯಾರಿಸಿ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ನತಶವಾಗಿ ಪ್ರಯತ್ನ ಮಾಡಿದರು. ಅವರು ಇಲ್ಲಿಂದ ಹೋಗುವ ಸಂದರ್ಭದಲ್ಲಿ ನಾನು ಬೇಗ ಖಾಯಿಲೆಯಿಂದ ಗುಣಮುಖನಾಗಿ ಈ ಸಭೆಗೆ ಬರುತ್ತೇನೆ, ನಿಮ್ಮೆಲ್ಲರ ಮಧ್ಯದಲ್ಲಿ ಇರುತ್ತೇನೆ ಎಂದು ಹೇಳಿದರು. ಆದರೆ ದುರ್ದೈವವಶಾತ್ ಅವರು ನಮ್ಮನ್ನು ಅಗಲಿ ಹೊರಟುಹೋದರು. ಅವರ ಭೌತಿಕ ಶರೀರ ಇಲ್ಲಿ ಇಲ್ಲದೇ ಇದ್ದರೂ ಸಹ ಅವರ ಒಂದು ಅತ್ಮದ ಶಕ್ತಿ ಇಲ್ಲಿ ಇದೆ ಎಂದು ನಾವು ಹೇಳಬಹುದು. ನಮ್ಮ ಹಿರಿಯರು ಹೇಳಿದ ಹಾಗೆ ಅವರು ಈ ಸಭೆಯ ಕಾರ್ಯ ಕಲಾಪಗಳನ್ನು ಬಹಳ ಮೇಲ್ಮಟ್ಟದಲ್ಲಿ ನಡೆಸಿಕೊಂಡು ಹೋಗಿ ನಮಗೆ ಒಂದು ಮಾರ್ಗದರ್ಶನ ಹಾಕಿಕೊಟ್ಟಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ ಹಾಗೆ ಲೋಕ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವುದಕ್ಕೆ ಯೋಗ್ಯರಾಗಿದ್ದಂತಹ ವ್ಯಕ್ತಿ ಅವರು. ಇಂಥಾ ಮಹಾ ವ್ಯಕ್ತಿಯನ್ನು ನಾವು ಇಂದು ಈ ಸಭೆ ಏಲ್ಲಿ ಸ್ಮರಿಸದಿದ್ದು ನಮ್ಮ ಅದ್ಯ ಕರ್ತವ್ಯ ಮತ್ತು ಅವರು ನಮಗೆ ಹಾಕಿಕೊಟ್ಟಿರತಕ್ಕ ಮಾರ್ಗದರ್ಶನದಲ್ಲಿ ನಾವೆಲ್ಲರೂ ಕೂಡ ನಡೆಯಬೇಕಾದ್ದು ನಮ್ಮ ಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅವರ ಕುಟುಂಬಕ್ಕೆ ಅವರ ಬಂಧು ಬಳಗದವರಿಗೆ ಅವರ ನಿಧನದಿಂದ ಉಂಟಾಗಿರತಕ್ಕ ದುಃಖವನ್ನು ಭರಿಸುವ ಪರಮಾತ್ಮನು ಶಕ್ತಿಯನ್ನು ಕೊಡಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಮತ್ತು ಈ ಸಭೆಯ ನಾಯಕರು ದಿವಂಗತ ಬಾಳಿಗಾ ಅವರ ಸ್ಮರಣೆಯನ್ನು ಮಾಡಲಕ್ಕೆ ಒಂದು ನಿರ್ಣಯವನ್ನು ಏನು ಇಚ್ಛಿಸಿದ್ದಾರೆಯೋ ಅದನ್ನು ಸಮರ್ಥಿಸುತ್ತಾ ನಾನು ನನ್ನ ಕಂಬಳಿಯನ್ನು ಕರೆಯುವುದಕ್ಕೆ ಸಿದ್ಧನಾಗಿದ್ದೇನೆ.

ಶ್ರೀ ಎಸ್. ಎಸ್. ಅರಕೇರಿ (ಬಳ್ಳಾರಿ) —ಸನ್ಮಾನ್ಯ ಸಭಾಧ್ಯಕ್ಷರೇ, ಈ ರಾಜ್ಯದ ನೂತನ ಮುಖ್ಯ ಮಂತ್ರಿಗಳು ಈ ಸಭೆಯು ಮುಂದೆ ಮಂಡಿಸಿರತಕ್ಕ ನಿರ್ಣಯವನ್ನು ಅನುಮೋದಿಸುತ್ತಾ ಶ್ರೀಮಾನ್ ಬಾಳಿಗಾ ಅವರನ್ನು ಕಳೆದುಕೊಂಡ ಈ ವಿಧಾನ ಸಭೆ ಬಹಳ ಬಡವಾಗಿದೆ ಎನ್ನುವ

(ಶ್ರೀ ಎಸ್. ಎಸ್. ಅರಕೇರಿ)

ಮಾತನ್ನು ನಾನು ಹೇಳುತ್ತೇನೆ. ಶ್ರೀಮಾನ್ ದಿವಂಗತ ಬಾಳಿಗಾ ಅವರ ವಿಷಯವಾಗಿ ಹೇಳುವುದಾದರೆ ಅವರು ಬಹಳ ಆಳವಾಗಿ ಅಧ್ಯಾಸ ಮಾಡಿಕೊಂಡು ಕಾನೂನಿನಲ್ಲಿ ಅಗಾಧವಾದ ಜ್ಞಾನ ಬಂಡಾರ ಶೇಖರಣೆ ಮಾಡಿಕೊಂಡಿದ್ದರು. ಅವರು ಈ ಸಭೆಯಲ್ಲಿ ಹೇಳುತ್ತಿದ್ದಂತಹ ಮಾತುಗಳು ಮತ್ತು ಅವರು ಕೊಡುತ್ತಿದ್ದಂತಹ ರೂಲಿಂಗ್‌ಗಳನ್ನು ನೋಡಿದರೆ ಅವರು ಒಬ್ಬ ದೊಡ್ಡ ಮೇಧಾವಿಗಳಾಗಿದ್ದರು ಎಂದು ಹೇಳಬಹುದು. ಅವರು ಈ ಸಭೆಯ ಅಧ್ಯಕ್ಷ ಸ್ಥಾನದಲ್ಲಿ ಇದ್ದು ಮಾಡಿದಂತಹ ಸೇವೆ ಅಗಾಧವಾದುದು ಆದರಿಂದ ಅವರ ಹೆಸರು ಇಡೀ ಭಾರತಖಂಡದಲ್ಲೇ ಲೋಕಶಾಹಿ ಇರುವವರೆಗೆ ಅಜರಾಮರವಾಗಿ ಉಳಿಯುತ್ತದೆ ಎಂದು ನಾನು ಹೇಳುತ್ತೇನೆ. ಶ್ರೀಮಾನ್ ಬಾಳಿಗಾ ಅವರು ತಮ್ಮದೇ ಆದಂತಹ ಒಂದು ಸಂಪ್ರದಾಯವು, ಒಂದು ಶಿಸ್ತು, ಒಂದು ನಿಯಮವನ್ನು ಈ ಸಭೆಯಲ್ಲಿ ಹಾಕಿ ಕೊಟ್ಟು ಹೋಗಿದ್ದಾರೆ. ಅವರ ಅಂತಃಕರಣ ಅವರು ಆಡಿದಂತಹ ಮಾತುಗಳು ಪ್ರತಿಯೊಬ್ಬ ತರುಣನಿಗೂ ಸಂಜೀವಿನಿಯಾಗಿದೆ. ಅವರು ತರುಣನನ್ನು ಅವರ ಚೇಂಬರಿಗೆ ಕರೆದು ಪ್ರೀತಿಯಿಂದ ಹೇಳುತ್ತಿದ್ದರು: ''ನೀವುಗಳು ಬಹಳ ಆಳವಾಗಿ ಅಧ್ಯಾಸ ಮಾಡಬೇಕೆಂದು''. ''ಒಂದು ಉದಾತ್ತವಾದ ಧ್ಯೇಯವನ್ನು ಇಟ್ಟುಕೊಂಡು ದೇಶದ ಸಮಸ್ಯೆಯನ್ನು ಎದುರಿಸತಕ್ಕಂಥ ಒಂದು ಚಿಂತನೆಯನ್ನು ಮಾಡಿಕೊಂಡು ಅದರಂತೆ ನಡೆದರೆ ದೇಶಕ್ಕೆ ಒಳ್ಳೆಯದು'' ಎಂದು ಅವರು ಹೇಳುತ್ತಿದ್ದರು. ಅಂತಹ ಒಬ್ಬ ಮಹಾವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಡಾಕ್ಟರ್ ಅಂಬೇಡ್ಕರ್ ಅವರ ವಿಷಯದಲ್ಲಿ ಅವರ ಒಂದು ಅಪರ್ಶ ಪ್ರೀತಿ ಇವುಗಳನ್ನು ಅವರು ತೋರಿಸುತ್ತಿದ್ದರು. ಎಂಥಾ ಒಂದು ಮಹಾ ಮೂರ್ತಿಯನ್ನು, ಒಂದು ಮಹಾ ವ್ಯಕ್ತಿಯನ್ನು ಈ ನಮ್ಮ ಮೈಸೂರು ವಿಧಾನ ಸಭೆ ಕಳೆದುಕೊಂಡಿದೆ. ಶ್ರೀ ವೈಕುಂಠ ಬಾಳಿಗಾರವರಂತಹ ಸ್ಪೀಕರ್ ಹಿಂದೆ ಯಾರು ಆಗಿಲ್ಲ ಮತ್ತು ಮುಂದೆ ಇಂತಹ ಅದರ್ಶ ಸ್ಪೀಕರ್ ಯಾರೂ ಆಗುವುದಿಲ್ಲ ಅಂತಾ ನಾನು ತಿಳಿದುಕೊಂಡಿದ್ದೇನೆ. ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ಒಂದು ಅಗಲುವಿಕೆಯಿಂದ ನಮ್ಮ ದೇಶಕ್ಕೆ ತುಂಬಾ ಹಾನಿಯಾಗಿದೆ. ಅವರ ಕುಟುಂಬದವರಿಗೆ ಅವರ ಅಗಲುವಿಕೆಯಿಂದ ಉಂಟಾಗಿರತಕ್ಕ ದುಃಖವನ್ನು ಭರಿಸಲು ದೇವರು ಶಕ್ತಿಯನ್ನು ಕೊಡಲಿ, ಅವರ ಆತ್ಮಕ್ಕೆ ಚಿರ ಶಾಂತಿಯು ದೊರೆಯಲಿ ಎಂದು ಹೇಳಿ, ನಾನು ನಮ್ಮ ರಿಪಬ್ಲಿಕ್ ಪಕ್ಷದ ಪರವಾಗಿ ನನ್ನ ದುಃಖವನ್ನು ಸೂಚಿಸುತ್ತೇನೆ.

ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ). – ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬಾಳಿಗಾ ಅವರು ಯಾವ ಅಧ್ಯಕ್ಷ ಸ್ಥಾನದಲ್ಲಿ ಇಂದು ಕುಳಿತುಕೊಳ್ಳಬೇಕಾಗಿತ್ತೋ ಅಂಥವರು ಈ ದಿನ ಪ್ರತಿಯೊಬ್ಬರ ನಾಲಿಗೆಯ ಮೇಲೆ ಕುಳಿತುಕೊಂಡಿದ್ದಾರೆ ಎಂದು ಹೇಳಬಹುದು. ಅವರ ಅನುಭವ ಅವರು ಜನಗಳಲ್ಲಿ ಇಟ್ಟಂತಹ ಒಂದು ಪ್ರೀತಿ ವಿಶ್ವಾಸ ಬಹಳ ಮಹತ್ವವಾದದ್ದು. ಅವರು ತುಂಬಾ ಜನಾನುರಾಗಿಗಳಾಗಿದ್ದರು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ವೀರೇಂದ್ರ ಪಾಟೀಲರು ಹೇಳಿದ ಹಾಗೆ ಶ್ರೀಮಾನ್ ಬಾಳಿಗಾ ಅವರು ನಮ್ಮನ್ನು ಅಗಲಿ ಹೋಗಿರುವುದು ನಮ್ಮ ಒಂದು ದೌರ್ಭಾಗ್ಯ. ಇವೊತ್ತಿನ ದಿವಸ ಹೊಸದಾಗಿ ಬಂದಂತಹ ಮಂತ್ರಿಮಂಡಲವನ್ನು ಮುಖ್ಯ ಮಂತ್ರಿಗಳನ್ನು ಬಾಳಿಗರು ಇದ್ದರೆ ಅಭಿನಂದಿಸುತ್ತಿದ್ದರು. ಆದರೆ ಇದರ ಬದಲಾಗಿ ಇದೇ ಮುಖ್ಯಮಂತ್ರಿಗಳು ಸಂತಾಪ ಸೂಚಕ ನಿರ್ಣಯವನ್ನು ತರಬೇಕಾದ ದುರ್ದೈವಿಗಳಾಗಿದ್ದಾರೆ. ಶ್ರೀಮಾನ್ ಬಾಳಿಗಾ ಅವರ ನಿಧನದ ಬಗ್ಗೆ ನಾವು ನಮ್ಮ ಅನುತಾಪವನ್ನು ಸೂಚಿಸಬೇಕಾಗಿದೆ. ಒಬ್ಬ ನಿಷ್ಠಾವಂತ ಮತ್ತು ಮೇಧಾವಿಯಾದ ಅಧ್ಯಕ್ಷರನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಅವರು ಇಂದು ನಮ್ಮನ್ನು ಅಗಲಿ ಹೋಗಿದ್ದರೂ ಕೂಡ ಅವರ ನೆನಪು ನಮ್ಮೆಲ್ಲರ ಮನಸ್ಸಿನಲ್ಲಿಯೂ ಸಂಪೂರ್ಣವಾಗಿ ಇದೆ. ಅವರಲ್ಲಿ ಒಂದು ಆಳವಾದ, ಅಗಾಧವಾದ ಕಾನೂನಿನ ಪಾಂಡಿತ್ಯ ಇತ್ತು. ಇಂಥಾ ಮಹಾ ವ್ಯಕ್ತಿಯನ್ನು ಈ ನಮ್ಮ ವಿಧಾನ ಸಭೆ ಕಳೆದುಕೊಂಡಿದೆ ಎಂದು ನಾನು ದುಃಖಿಸಬೇಕಾಗಿದೆ. ಅವರ ಒಂದು ಸಮೀಪವರ್ತಿ ಸಂಬಂಧ ನನಗೆ ಬಂದಿತ್ತು. ಅವರು ಹುಬ್ಬಳ್ಳಿಗೆ ಒಂದು ಸಾರಿ ಬಂದಾಗ ನಾನು ಅವರೊಡನೆ ಇದ್ದೆ. ಅವರು ತಮ್ಮ ಅನುಭವ ಪೂರ್ಣವಾದ ಮಾತುಗಳನ್ನು ನನಗೆ ಆಗಾಗ ಹೇಳುತ್ತಿದ್ದರು. ಹೆಚ್ಚು ಹೆಚ್ಚು ಓದಬೇಕು ಎಂದು ಹೇಳುತ್ತಿದ್ದರು. ತಮ್ಮ ಅನುಭವವನ್ನು ನಾಡಿಗೆ ಹಿತವಾಗುವಂತೆ ನೀಡಬೇಕೆಂಬ ಹಂಬಲ ಅವರಲ್ಲಿತ್ತು. ಅದೂ ಅಲ್ಲದೆ ಈಗಿನ ಒಂದು ರಾಜಕಾರಣ ಯಾವರೀತಿಯಲ್ಲಿ ಶುದ್ಧವಾಗಿರಬೇಕೆಂದು ಅವರು ಹೇಳುತ್ತಿದ್ದರು. ಅವರ ವಿಚಾರದಲ್ಲಿ ಎಷ್ಟು ಹೇಳಿದರೂ ಕಡಿಮೆಯೇ ನರಿ. ಅವರ ನಿಧನದಿಂದ ಈ ನಾಡಿಗೆ ಹಾಗೂ ಹೆಚ್ಚಾಗಿ ಪ್ರಜಾತಂತ್ರಕ್ಕೇ ಒಂದು ದೊಡ್ಡ ಆಘಾತವಾಗಿದೆ. ಅವರ ಒಂದು ಅಗಲುವಿಕೆಯಿಂದ ನಮಗೆ ಉಂಟಾಗಿರತಕ್ಕ ದುಃಖವನ್ನು ಸಹಿಸಲು ದೇವರು ಶಕ್ತಿಯನ್ನು ಕೊಡಲಿ, ಅವರ ಆತ್ಮಕ್ಕೆ ಭಗವಂತನು ಚಿರ ಶಾಂತಿಯನ್ನು ನೀಡಲಿ ಎಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri R. DAYANANDA SAGAR (Chamarajpet).—Mr. Speaker, Sir, we are facing a very sorrowful situation. Speaker Baliga was one of the very brilliant and most learned men not only in the State of Mysore but in the whole country. His demise is a very great loss to us, particularly for Mysoreans, and this House has grown poorer by his demise. Sir, this is a very wide world ; many are born here unseen, unheard and unnoticed. Only a few people occupy positions of importance and eminence and amongst them very few indeed go to the top, endear themselves to all sections of the people, and become not only popular but by their great qualities become great. Their demise becomes a sorrowful matter for everybody. The feelings expressed by the Ruling Party, much more so, by the Opposition depict the feelings of sorrow and it is a testimony to the fact how great a man Baligaji was and how really poorer we are having lost him.

Sir, we are on the verge of electing another Speaker. We would like to have a person who would come as nearer as possible to Baligaji because Baligaji was above politics, above petty feelings and it is required of a man occupying such a high position that he should be more humble, more accommodative and more affectionate specially to the minority. He was so and he had feelings of affection towards the minority and at the same time he never offended the majority party also. He was affectionate to us, but at the same time he was more considerate towards the Opposition. These are some of things which make a man great, specially a Speaker of eminence. Therefore, Sir, when we are on the verge of electing a new Speaker, we have got to exercise our reasonability and try to see as far as possible that we bring in another person who would be as able and who would come as nearer as possible to Baligaji, if possible by unanimity putting aside small differences we have. So saying, Sir, I pray God Almighty that Baligaji's soul rest in peace.

So saying, Sir, I support the Resolution moved by our Leader.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಲೋಕಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ ಶ್ರೀಮಾನ್ ಮಾಲಂಕರ್ ರವರು ಯಾವ ರೀತಿ ಮೆಚ್ಚುಗೆಯನ್ನು ಪಡೆದಿದ್ದರೋ ಅಂತಹ ಗೌರವಗಳನ್ನು ನಮ್ಮ ಈ ಸಭೆಯ ಅಧ್ಯಕ್ಷರಾಗಿ ಶ್ರೀಮಾನ್ ಬಾಳಿಗಾರವರು ಪಡೆದು ಅಷ್ಟು ಹೆಸರುವಾಸಿಯಾಗಿದ್ದಾರೆ ಎಂದು ಹೇಳುವುದು ಇಲ್ಲಿ ಸೂಕ್ತವಾಗಿದೆ. ಅವರು ಕೊಟ್ಟಂತಹ ತೀರ್ಪುಗಳು ಮತ್ತು ಅವರು ಶಾಸನ ಸಭಾ ಸದಸ್ಯರುಗಳನ್ನು ಕಾಣುತ್ತಿದ್ದಂತಹ ವಿಧಾನ ಈ ಎಲ್ಲ ಅದರ್ಶಗಳು ಇಂದು ನಮ್ಮ ಮುಂದೆ ಎದ್ದು ಕಾಣುತ್ತಿವೆ. ಶಾಸನಸಭೆಯಲ್ಲಿ ಕೆಲವು ಸತ್ಸಂಪ್ರದಾಯಗಳನ್ನು ಹಾಕಿ ಒಂದು ಒಳ್ಳೆಯ ಸಂಪ್ರದಾಯವನ್ನು ಬೆಳೆಸಲು ಸರ್ವ ಪ್ರಯತ್ನವನ್ನು ಮಾಡಿಕೊಂಡು ಬಂದಿದ್ದರು. ಈ ಸಭಾ ನಾಯಕರು ಮತ್ತು ಎದುರುಪಕ್ಷದ ನಾಯಕರು ಹೇಳಿದಂತೆ ಮುಂದೆ ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಬರುವಂತಹ ವ್ಯಕ್ತಿಗಳು ಯಾವ ರೀತಿಯಾಗಿ ಇರಬೇಕು ಮತ್ತು ಎಲ್ಲ ಪಕ್ಷಗಳೊಡನೆಯೂ ಯಾವ ರೀತಿಯಾಗಿ ಪೂರ್ಣ ಸಹಕಾರ ಪಡೆಯಬೇಕು ಎನ್ನುವುದಕ್ಕೆ ಅವರು ಹಾಕಿಕೊಟ್ಟಿರುವ ಮಾರ್ಗ ದರ್ಶನಗಳೇ ಅವರಿಗೆ ಸಹಾಯಕವಾಗಿರುತ್ತವೆ. ಇಷ್ಟೇ ಅಲ್ಲ ರಾಜ್ಯದ ಹೊರಗಡೆ ಎಂದರೆ ದೆಹಲಿಗೆ ಹೋದಾಗ ಈ ರಾಜ್ಯಕ್ಕೆ ಯಾವ ಯಾವ ಕೆಲಸಗಳು ಆಗಬೇಕು ಎನ್ನುವುದರ ಎಲ್ಲ ಮಾಹಿತಿಗಳನ್ನೂ ತಮ್ಮ ಜೊತೆಯಲ್ಲಿಯೇ ತೆಗೆದುಕೊಂಡು ಅಲ್ಲಿರುವ ಮಂತ್ರಿಗಳೊಡನೆ ಮತ್ತು ಅಧಿಕಾರಿಗಳೊಡನೆ ಚರ್ಚಿಸಿ, ಅವರಿಗೆ ಬೇಕಾದ ಮಾಹಿತಿಗಳನ್ನೆಲ್ಲಾ ಒದಗಿಸಿ ಆ ಕೆಲಸಗಳನ್ನು ಮಾಡಿ ನಮ್ಮ ರಾಜ್ಯಕ್ಕೆ ಸಹಾಯ ಮಾಡುತ್ತಿದ್ದರು ಮತ್ತು ಈ ರಾಜ್ಯದ ಪ್ರಗತಿಗಾಗಿ ಬಹಳವಾಗಿ ಶ್ರಮಿಸುತ್ತಿದ್ದರು.

(ಶ್ರೀ ಎನ್. ಹುಚ್ಚಮಾಸ್ತಿ ಗೌಡ)

ಶ್ರೀಮಾನ್ ಬಾಳಿಗಾರವರು ಅಲಂಕರಿಸಿದ್ದ ಸ್ಥಾನದಿಂದ ಅವರು ಗೌರವಪಡೆದಿರಲಿಲ್ಲ. ಅವರ ಹಿರಿಯ ವ್ಯಕ್ತಿತ್ವದಿಂದ ಆ ಸ್ಥಾನಕ್ಕೆ ಗೌರವ ತಂದಿದ್ದ ಮಹನೀಯರು. ಅವರು ಎಲ್ಲರೊಡನೆಯೂ ಸಹಜವಾದ ಪ್ರೇಮ ಹಾಗೂ ಪಾಕ್ಷಲ್ಯಗಳನ್ನು ಇಟ್ಟುಕೊಂಡಿದ್ದಂತಹ ಒಬ್ಬ ಉನ್ನತ ವ್ಯಕ್ತಿಯಾಗಿದ್ದರು. ಅವರ ದೊಡ್ಡತನ ಅವರು ಇಲ್ಲದಿರುವಾಗ ಇತರರೊಡನೆ ಹೋಲಿಸಿ ನೋಡಿದಾಗ ಗೊತ್ತಾಗುತ್ತದೆ. ಕೆಲವಾರು ದಿವಸಗಳಲ್ಲಿ ಈ ವ್ಯತ್ಯಾಸವನ್ನು ನಾವು ನೋಡಬಹುದು. ಇಂತಹ ಶ್ರೇಷ್ಠ ವ್ಯಕ್ತಿಯಾಗಿದ್ದಂತಹ ಶ್ರೀಮಾನ್ ಬಾಳಿಗಾರವರ ನಿಧನದ ಬಗ್ಗೆ ತಂದಿರತಕ್ಕ ಶ್ರೀಮಾನ್ ವೀರೇಂದ್ರ ಪಾಟೀಲರ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಆರ್. ರಂಗೇ ಗೌಡ್ರ(ಮಾಗಡಿ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬಾಳಿಗಾರವರ ನಿಧನದಿಂದ ನಾವೆಷ್ಟು ದುಃಖದಿಂದ ಇದೆವೆ ಎನ್ನುವುದಕ್ಕೆ ಇಂದು ಇಲ್ಲಿ ಈಗಾಗಲೇ ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ನಮಗೆ ಗೊತ್ತಾಗುತ್ತದೆ. ನನಗಂತೂ ವೈಯಕ್ತಿಕವಾಗಿ ಅವರು ಸಹೋದರರಾಗಿ ಇದ್ದರು ಮತ್ತು ಅವರ ಕುಟುಂಬದ ಒಬ್ಬ ವ್ಯಕ್ತಿಯಾಗಿಯೂ ಇದ್ದೆ. ಅವರು ಸಮಷ್ಟಿ ಕುಟುಂಬದ ಒಬ್ಬ ವ್ಯಕ್ತಿಯಾಗಿ ಎಲ್ಲರಿಗೂ ಒಂದು ಮಾರ್ಗದರ್ಶನ ನೀಡುತ್ತಿದ್ದರು. ಇಂತಹ ವ್ಯಕ್ತಿಯ ಲಾಭ ಇಂದು ನಮಗೆ ಇಲ್ಲ. ಇದರ ಲಾಭವನ್ನು ವೈಯಕ್ತಿಕವಾಗಿ ನಾನು ಪಡೆಯುತ್ತಿದ್ದೆ. ಇವರಲ್ಲಿದ್ದ ವಿಶಾಲ ದೃಷ್ಟಿ, ಸಮತೆ, ಅಂತಃಕರಣ ಹಾಗೂ ಪ್ರೀತಿ ವಿಶ್ವಾಸಗಳನ್ನು ನಾವೆಲ್ಲರೂ ಅವರ ಜೊತೆಯಲ್ಲಿದ್ದು ಪಡೆಯುತ್ತಿದ್ದೆವು. ಆದುದರಿಂದ ಇಂತಹ ಗೌರವವನ್ನು ಪಡೆದಂತಹ ವ್ಯಕ್ತಿ ಇಂದು ನಮ್ಮ ಮುಂದೆ ಇಲ್ಲ. ಅವರು ಜನರೆಲ್ಲರ ಸ್ನೇಹಿತರಾಗಿದ್ದರು ಅವರಲ್ಲಿ ಬಡವರು ಬಲ್ಲವರು ಎನ್ನುವ ಭೇದ ಭಾವನೆಯೇ ಇರುತ್ತಿರಲಿಲ್ಲ. ಇಂತಹ ಒಂದು ಉನ್ನತ ಸಂಪ್ರದಾಯಗಳನ್ನು ಸ್ಥಾಪಿಸಿದ ಮಹಾನ್ ವ್ಯಕ್ತಿಯಾಗಿದ್ದರು. ಇಂತಹ ವ್ಯಕ್ತಿಗಳು ಇನ್ನು ಮುಂದೆ ನಮ್ಮ ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಸಿಗುವುದು ದುರ್ಲಭ ಎಂದು ಹೇಳಬೇಕಾಗುತ್ತದೆ. ಇವರೊಡನೆ ಒಂದು ಸಾರಿ ನಾನು ಪೇರುವ ಸಂದರ್ಭ ಬಂದಿತ್ತು. ಮೈಸೂರು ಸಂಸ್ಥಾನದ ಕಾಂಗ್ರೆಸ್ ಸಮಿತಿಯಲ್ಲಿದ್ದಾಗ ಇವರು ಒಂದು ಸಮ್ಮೇಳನವನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಸಂದರ್ಭದಲ್ಲಿ ಮಾಡಿದ ಒಂದು ಸಬ್ ಕಮಿಟಿಯಲ್ಲಿ ಇವರೊಡನೆ ಕಳಿತು ಕೆಲಸ ಮಾಡುವ ಸನ್ನಿವೇಶ ಒದಗಿತ್ತು. ಆಗ ಅವರು ನೀಡಿದಂತಹ ಮಾರ್ಗದರ್ಶನಗಳು ಇನ್ನೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಇದೆ. ಇವರು ನನ್ನನ್ನು ಒಂದು ಶಿಶು ಬೆಳೆಸಿದಂತೆ ನನಗೆ ತಂದೆಯೋಪಾದಿಯಲ್ಲಿದ್ದರು. ಇವರು ನನಗೆ ಸ್ನೇಹಿತರು ಹಾಗೂ ಗುರುಗಳಾಗಿಯೂ ಇದ್ದರು. ಇದು ಅವರ ಮಮತೆಯ ಪ್ರತೀಕವನ್ನು ತೋರಿಸುತ್ತದೆ. ಇವರು ಆಗಾಗ್ಗೆ ನನ್ನನ್ನು ಕರೆದು ಒಂದು ಸಂಸ್ಥೆಯಲ್ಲಿ ಯಾವ ರೀತಿ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಅವರು ಪದೇಪದೇ ಹೇಳುತ್ತಿದ್ದರು. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳಿದಂತೆ ನಮ್ಮ ದೇಶಕ್ಕೆ ಆಗಬೇಕಾದ ಕೆಲಸಗಳನ್ನು ಹೊರಗಡೆಗೆ ಹೋಗಿ ಹೇಗೆ ಮಾಡಿಕೊಂಡು ಬರುತ್ತಿದ್ದರು ಎನ್ನುವುದು ನಮಗೆ ಗೊತ್ತಾಗುತ್ತದೆ. ಅವರು ದೆಹಲಿಗೆ ಹೋದಾಗ ಈ ದೇಶಕ್ಕೆ ಆಗಬೇಕಾದ ಕೆಲಸಗಳ ಬಗ್ಗೆ ಅವನ್ನು ಪರಿಶೀಲನೆ ಮಾಡಿ ಅವು ಕಾರ್ಯಗತವಾಗುವಂತೆ ಮಾಡಲು ಬಹಳ ಸಹಾಯ ಮಾಡುತ್ತಿದ್ದರು. ಇಂತಹ ಉನ್ನತ ವ್ಯಕ್ತಿ ಇಂದು ನಮ್ಮ ಮುಂದೆ ಇಲ್ಲ. ಇದರಿಂದ ಇಂದು ನಮ್ಮ ದೇಶ ಅನಾಥವಾಗಿದೆ ಎಂದು ಹೇಳಬೇಕಾಗಿದೆ. ಆದರೆ ಅವರು ಹಾಕಿಕೊಟ್ಟಂತಹ ಮಾರ್ಗದರ್ಶನಗಳನ್ನು ಪ್ರತಿಯೊಬ್ಬರೂ ಅನುಸರಿಸಿಕೊಂಡು ಹೋದರೆ ಅದೇ ಸೂಕ್ತವಾಗಿರುತ್ತದೆ. ಈ ದಿವಸ ಅವರು ನಮ್ಮ ಮುಂದೆ ಇಲ್ಲದಿದ್ದರೂ ಅವರು ಹಾಕಿಕೊಟ್ಟಿರುವಂತಹ ಮಾರ್ಗದರ್ಶನಗಳು ನಮ್ಮ ಮುಂದೆ ಇವೆ. ಇಂತಹ ಉನ್ನತ ವ್ಯಕ್ತಿಗೆ ಚಿರ ಶಾಂತಿ ದೊರೆಯಲಿ ಮತ್ತು ಇವರ ನಿಧನದಿಂದ ಆಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಭಗವಂತನು ಕೊಡಲಿ ಎಂದು ನಾನು ಇಲ್ಲಿ ಪ್ರಾರ್ಥಿಸುತ್ತೇನೆ ಮತ್ತು ಮಾನ್ಯ ಸಭಾನಾಯಕರು ಇಂದು ಇಲ್ಲಿ ತಂದಿರುವ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ಕೊಟ್ಟು ನ ನ್ನ ಮಾತನ್ನು ಮುಗಿಸುತ್ತೇನೆ.

2-00 P.M.

ಶ್ರೀ ಮಹದೇವ್ ಜಿ. ಬಣಕಾರ್ (ಬ್ಯಾಡಗಿ).—ಮಾನ್ಯ ಅಧ್ಯಕ್ಷರೇ, ಈವರೆಗೂ ನನ್ನ ಅನೇಕ ಮಾನ್ಯ ಹಿರಿಯ ಸ್ನೇಹಿತರು ದಿವಂಗತ ಬಾಳಿಗಾರವರ ಸದ್ಗುಣ, ಸೌಜನ್ಯ ಹಾಗೂ ಅವರ ಸರಳತನಗಳ ಬಗ್ಗೆ ಅನೇಕ ವಿಷಯಗಳನ್ನು ತಮ್ಮ ಮುಂದಿಟ್ಟಿದ್ದಾರೆ. ನಾನೂ ಕೂಡ ಅವರ

ವಿಷಯದಲ್ಲಿ ನನ್ನ ಶ್ರದ್ಧಾಂಜಲಿಯನ್ನರ್ಪಿಸಲು ಒಂದು ಸಣ್ಣ ಕವನವನ್ನು ರಚಿಸಿದ್ದೇನೆ: ನೃಪ್ತಿ ಬಹಳ ವಿಶಾಲವಾದದ್ದು. ದಿಗಂತದವರೆಗೂ ಮುಂಜು ಹನಿ ಬಿಂಬಿಸಿಕೊಳ್ಳುವಂತೆ ಈ ಸದನದ ಅಧ್ಯಕ್ಷರಾಗಿದ್ದ ದಿವಂಗತ ಬಾಳಿಗಾರವರಲ್ಲಿ ಜ್ಞಾನದ ಬೆಳಕು, ಶಾಂತಿ, ತಾಳ್ಮೆಗಳು ತುಂಬಿ ತುಳುಕುತ್ತಿದ್ದವು. ಅಂಥಾ ಒಬ್ಬ ಆದರ್ಶಮೂರ್ತಿಗಳು ಈ ದಿವನ ನಮ್ಮೆಲ್ಲರನ್ನೂ ಬಿಟ್ಟು ಅಗಲಿದ್ದಾರೆ. ಅದಾಗ್ಯೂ ಅವರು ನಮ್ಮೆಲ್ಲರ ಹೃದಯದಲ್ಲೂ ಅನನಾರೂಢರಾಗಿದ್ದಾರೆ. ೮ ದಿವಂಗತ ಬಾಳಿಗಾರವರ ಬಗ್ಗೆ ನನ್ನ ಶ್ರದ್ಧಾಂಜಲಿಯನ್ನರ್ಪಿಸಲು ನಾನು ಈ ಒಂದು ಸಣ್ಣ ಕವನವನ್ನು ರಚಿಸಿದ್ದೇನೆ—ಅದು ಹೀಗಿದೆ:

ಬಾಳಿಗರೆ ನಿಮ್ಮಡಿಗೆ ಶ್ರದ್ಧಾಂಜಲಿ
ಅರ್ಪಿಸುವೆ ತನುಮನದ ಪುಷ್ಪಾಂಜಲಿ ‖ಪಲ್ಲವಿ‖
ಸೌಜನ್ಯ ಸರಳತೆಯ ಮೈವೆತ್ತ ಮೂರ್ತಿ
ದಿಗ್ ದಿಗಂತಕು ಹಬ್ಬಿನಿಂತ ಕೀರ್ತಿ—
ಹಣ್ಣಾದ ಹೃದಯದಲಿ ಹಾಲು ಜೇನು
ಮರಳಿ ಭೂಮಿಗಿಳಿದೊಮ್ಮೆ ಬಾರದೇನು ?
ತುಂಬ ಬಾರವಹಾನಿ ದೇಶಕಾಯ್ತು
ಮಾರ್ಗದರ್ಶನವೆಮಗೆ ದೊರೆಯದಾಯ್ತು—
ನಮತೆ ಮಮತೆಗೆ ಮಿಸಲಿಟ್ಟ ಜೀವ
ಶುಭ್ರಸದೃಶ ಶಿಖರ ನಿಮ್ಮ ಭಾವ—
ನಿನ್ನಮಲ ಜೀವಿತವಕಂದು ವಿಧಿಯು
ಕೊಂಡು ಒಯ್ದಿತು ನಮ್ಮ ನಾಡ ನಿಧಿಯು—
ಬಾಳಿಗರೆ ನಿಮ್ಮಡಿಗೆ ಶ್ರದ್ಧಾಂಜಲಿ
ಅರ್ಪಿಸುವೆ ತನುಮನದ ಪುಷ್ಪಾಂಜಲಿ

ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದುಗೋಳ).— ಮಾನ್ಯ ಅಧ್ಯಕ್ಷರೇ, ಈ ದಿವನ ಸಭೆಯ ಮುಂದೆ ಮಂಡಿಸಿರತಕ್ಕ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ನೀಡುತ್ತಾ ಎರಡು ಮಾತುಗಳನ್ನು ಆಡಬಯಸುತ್ತೇನೆ.

ದಿವಂಗತ ಬಾಳಿಗಾರವರಲ್ಲದ್ದ ಆ ಘಂಟಾಘೋಷವಾವ ಧ್ವನಿ, ಅವರ ಘಂಟಾನಾದ ಹಸನ್ಮುಖ ಹಾಗೂ ಅವರ ಹುಸಿನಗು ಇವುಗಳನ್ನು ನಾವೆಂದಿಗೂ ಮರೆಯುವುದಕ್ಕಾಗುವುದಿಲ್ಲ. ಅಷ್ಟೇ ಅಲ್ಲದೆ ಅವರು ಈ ಶಾಸನ ಸಭೆಗೆ ಆರಿಸಿ ಬಂದಂಥ ಹೊಸಬರಿಗೆ ಒಬ್ಬ ಉತ್ತಮ ಶಿಕ್ಷಕರಾಗಿದ್ದರು. ಅವರು ಶಾಸನ ಸಭೆಯ ಒಳಗೂ ಹೊರಗೂ ಒಳ್ಳೇ ಬೆಳಕನ್ನು ಚೆಲ್ಲುತಕ್ಕಂಥ ವ್ಯಕ್ತಿಗಳಾಗಿದ್ದರು. ಅವರು ನಮ್ಮೆಲ್ಲರನ್ನೂ ದೇಶದ ಆದರ್ಶ ಶಾಸಕರನ್ನಾಗಿ ಮಾಡಬೇಕು ಎಂಬ ಹಂಬಲವನ್ನು ಇಟ್ಟುಕೊಂಡಿದ್ದರು. ಈ ಸಂದರ್ಭದಲ್ಲಿ ಅವರ ವಿಶಾಲ ಭಾವನೆಯ ಬಗ್ಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತಿದೆ. ಅದೇನೆಂದರೆ—ಈ ದಿವಸ ಮುಖ್ಯ ಮಂತ್ರಿಗಳಾಗಿರುವ ಶ್ರೀ ವೀರೇಂದ್ರ ಪಾಟೀಲರು ಹಿಂದೆ ಪಿ. ಡಬ್ಲ್ಯು.ಡಿ. ಮಂತ್ರಿಗಳಾಗಿದ್ದ ಕಾಲಕ್ಕೆ ಇಲ್ಲಿ ಆ ಕೃಷ್ಣಾನದಿಯ ನೀರಿನ ಬಗ್ಗೆ ಜೆರ್ಜೆ ನಡೆಯುವ ಕಾಲಕ್ಕೆ ನಮಗೆ ಒಂದು ಮಾರ್ಗದರ್ಶನ ನೀಡಲಿಕ್ಕಾಗಿ ಅವರು ಜಗತ್ತಿನಲ್ಲಿ ಎಲ್ಲೆಲ್ಲಿ ಈ ಜಲವಿವಾದಗಳು ನಡೆದಿದ್ದವೋ ಅಂಥವುಗಳನ್ನೆರ್ಲಾ ಕ್ರೋಢೀಕರಿಸಿ ನಮಗೆ ಒಂದು ದೊಡ್ಡ ಅನುಕೂಲವನ್ನು ಮಾಡಿದ್ದರು. ಹೀಗೆ ಅವರು ಸದಾ ದೇಶದ ಹಿತಚಿಂತನೆಯನ್ನೇ ಮಾಡುತ್ತಿದ್ದವರು. ಅಂಥ ಒಬ್ಬ ಉದಾರವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಇನ್ನು ಅಂಥವರು ಸಿಕ್ಕುವುದು ಬಹಳ ದುರ್ಲಭ. ಅವರು ನಮಗೆ ಹಾಕಿಕೊಟ್ಟಿರುವ ಸತ್ಸಂಪ್ರದಾಯಗಳಂತೆ ನಾವು ಮುಂದುವರಿಯಬೇಕಾದ್ದು ಅಗತ್ಯ, ಹಾಗೂ ಅವರಿಂದ ದೇಶಕ್ಕೆ ಒಳ್ಳೆಯದಾಗುತ್ತದೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನನ್ಮಾನ್ಯ ಅಧ್ಯಕ್ಷರೇ, ಈ ದಿವನ ಈ ಸಭೆಯ ನಾಯಕರು ಸಭೆಯ ಮುಂದೆ ತಂದಿರುವ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ನಾನು ನೀಡುತ್ತೇನೆ. ಬಾಳಿಗರು ಈ ದಿವನ ನಮ್ಮೆಲ್ಲರನ್ನೂ ಬಿಟ್ಟು ಅಗಲ ಹೋಗಿದ್ದಾರೆ.

(ಶ್ರೀ ಪಾಟಾಳ್ ನಾಗೇರಾಜ್)

ಆ ದಿವಂಗತರು ಅಧಿಕಾರಾವಧಿಯಲ್ಲಿದ್ದಾಗ ಅವರು ಈ ಸಭಾಕಾರ್ಯ ಕಲಾಪಗಳ ಬಗ್ಗೆ ಇಡೀ ದೇಶಕ್ಕೇ ಒಂದು ಮೆರುಗನ್ನು ಕೊಡಕ್ಕ ರೀತಿಯಲ್ಲಿ, ಒಂದು ಆದರ್ಶ ರೀತಿಯಲ್ಲಿ ಅವರು ನಡೆದುಕೊಂಡಿದ್ದಾರೆ. ಅವರು ಒಳ್ಳೆಯ ನೀತಿವಂತರು; ಅವರಲ್ಲಿ ಒಳ್ಳೇ ಮಾನವೀಯತೆ ಇತ್ತು. ಅಂಥವರು ಈ ದಿವನ ನಮ್ಮ್ನ್ನು ಬಿಟ್ಟು ಅಗಲಿದರೂ ಅವರು ಈ ಕರ್ಣಾಟಕದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥ ಒಂದು ದಾಖಲೆಯನ್ನು ಗಳಿಸಿಟ್ಟಿದ್ದಾರೆ. ಅವರ ಹೆಸರು ಚಿರಂಜೀವಿಯಾಗಿ ಉಳಿಯುವ ಒಂದು ಸ್ಮಾರಕವನ್ನು ರಚಿಸಬೇಕೆಂದು ನಾನು ಸಲಹೆ ಮಾಡಿ, ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನು ಈಯುವೆಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri M. A. AMALORPAVAM (Bharathinagar).—Mr. Speaker, Sir, it is with pride and pleasure I rise before you to support the resolution moved by the Hon'ble the Leader of the House. This House has sustained an irreparable loss in the passing away of that intellectual giant Shri Vaikunta Baliga. If we were to mourn the loss or condole the death or pay tributes to a lesser person than Sri Baliga, I would certainly sound repetitive and redundant since we are all paying rich tributes to one who appeared like an intellectual Gulliver and in whose presence we looked like Lilliputs. Even if we are to speak for hours together we would not have paid adequate compliments. Sri Baliga was not an individual; he was an institution. Shri Baliga was not merely a person; he was a personality. By his erudition and scholarship he has proved beyond all shadow of doubt that it would never be easy or possible for any one to replace that extraordinarily eminent and illustrious personality. When we think of Speakers, we normally think of Vithalbhai Patel and Mavalankar and in the same category we think of Shri Vaikunta Baliga. Without fear of contradiction I can safely submit that perhaps he was the best Speaker in the entire country. I am not trying to make any invidious distinction when I say that he was the best Speaker because by his amiable nature, affable temperament, ready witticism and his sparkling intellectual ready rulings, he has outbeaten himself. Even an incurable optimist he has made a little pessimistic today and the pessimism is due to the fact whether the void that has been created by the demise of this memorable person can ever be filled. I really feel that I am privileged to associate myself with the eminent Speaker of the day in paying my humble tributes to the great soul. May his soul rest in peace.

ಶ್ರೀಮತಿ ಲೀಲಾವತಿ ರೈ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳವರು ಸಭೆಯ ಮುಂದೆ ಮಂಡಿಸಿರತಕ್ಕ ಸಂತಾಪನೂಚಕ ನಿರ್ಣಯದ ಬಗ್ಗೆ ನನ್ನ ಅನುಮೋದನೆ ಸೂಚಿಸುತ್ತ ಕೆಲವು ಮಾತುಗಳನ್ನು ಆಡಬಯಸುತ್ತೇನೆ.

ದಿವಂಗತ ಬಾಳಿಗಾರವರು ಹುಟ್ಟಿ ಬೆಳೆದದ್ದು ಆ ಬಂಟ್ವಾಳ ಕ್ಷೇತದಲ್ಲ. ಈ ದಿವನ ನಾವಾದರೂ ಈ ಸಭೆಗೆ ಆರಿಸಿ ಬಂದಿರುವುದು ಅವೇ ಬಂಟ್ವಾಳ ಕ್ಷೇತ್ರದಿಂದ. ಆ ಕ್ಷೇತ್ರಕ್ಕೆ ಬಾಳಿಗಾರವರು ಬಹಳ ಸೇವೆಯನ್ನು ಸಲ್ಲಿಸಿದ್ದಾರೆ. ಹಾಗೆ ಎಷ್ಟೋ ವರ್ಷಗಳಿಂದ ಕೆಲಸ ಮಾಡಿಕೊಂಡು ಬರುತ್ತಿದ್ದಂಥ ಒಬ್ಬ ದಕ್ಷನಾದ ಸುಪುತ್ರನನ್ನು ಆ ಕ್ಷೇತ್ರ ಇಂದು ಕಳೆದುಕೊಂಡಿದೆ. ಆ ಸುಪುತ್ರನಿಗೆ ನಾನು ಈ ದಿವನ ಆ ಬಂಟ್ವಾಳ ಕ್ಷೇತ್ರದ ಜನತ ಪರವಾಗಿಯೂ, ಇಲ್ಲರತಕ್ಕ ಮಾನ್ಯ ಮಹಿಳಾ ಸದಸ್ಯರ ಪರವಾಗಿಯೂ ಮತ್ತು ಇಲ್ಲಿಯ ಟ್ರೆಜರಿಬೆಂಚಿನವರ ಪರವಾಗಿಯೂ, ಆ ಸುಪುತ್ರನ ಆತ್ಮಕ್ಕೆ ಸರ್ವದಾ ಶಾಂತಿ ಲಭಿಸಲೆಂದು ಹಾರೈಸಿ ಹಾಗೂ ಆ ಮೃತರ ಕುಟುಂಬ ವರ್ಗದವರಿಗೆ ಧೈರ್ಯಾಗಿರತಕ್ಕ ದುಃಖವನ್ನು ಸಹಿಸಲು ಪರಮಾತ್ಮನು ಶಕ್ತಿಯನ್ನು ಕೊಡಲೆಂದು ಪ್ರಾರ್ಥಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ವಿ. ಐಕ್ಕಾಳ್ (ಸುರತ್‌ಕಲ್).—ಅಧ್ಯಕ್ಷರೇ, ಶ್ರೀಮಾನ್ ಬಾಳಿಗರ ಹೆಸರು ಹೆಚ್ಚಿನವರಿಗೆ ಅವರ ಜನ್ಮ ಹೆಸರು ಏನು ಅಂತ ಹೇಳಿ ಗೊತ್ತಿರಲಿಕ್ಕಿಲ್ಲ. ಕೆಲವರಿಗೆ ಗೊತ್ತಿರಬಹುದು. ಅದು ವೈಕುಂಠ ಬಾಳಿಗ ಅಂತ. ಅವರು ಈ ದಿವಸ ಶ್ರೀಮನ್ನಾರಾಯಣ ಇರತಕ್ಕ ವೈಕುಂಠದಲ್ಲಿ ಇದ್ದಾರೆ, ಇಂತಹ ಒಂದು ಸಂದರ್ಭದಲ್ಲಿ ನಾವು ಅವರಿಗೆ ಪುಷ್ಪಾಂಜಲಿಯನ್ನು ಅರ್ಪಿಸಬೇಕಾದ್ದು ನ್ಯಾಯ, ಈ ಹಿಂದೆ ಹೇಳಿದಂತೆ ಅವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಹಿತಚಿಂತನೆಯನ್ನು ಸದಾ ಮಾಡುತ್ತಿದ್ದರು. ನಾವು ವಿರೋಧ ಪಕ್ಷದಲ್ಲಿ ಇರಲಿ ಅಥವಾ ನಮ್ಮ ಜಿಲ್ಲೆಯವರು ಆಳುವಂತ ಪಕ್ಷದಲ್ಲಿ ಇರಲಿ ಇವತ್ತು ನಮ್ಮ ಜಿಲ್ಲೆಗೆ ಒಂದು ದೊಡ್ಡ ಹಾನಿಯಾಗಿದೆ. ಈಗ ನೂತನವಾಗಿ ಬಂದಂತಹ ಸರ್ಕಾರ ಅದನ್ನು ಭರ್ತಿ ಮಾಡಿಕೊಡಬೇಕು. ಶ್ರೀಮಾನ್ ಬಾಳಿಗರವರ ಆಟಿಟ್ಯೂಡ್ ಯಾವ ರೀತಿ ಇತ್ತು ಎಂಬುದನ್ನು ಶ್ರೀಮಾನ್ ಕೃಷ್ಣನ್‌ರವರು ಓದಿ ಹೇಳಿದರು. ವಿರೋಧಪಕ್ಷದವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಂಪೂರ್ಣವಾದ ಒಂದು ಅವಕಾಶ, ಆಳುವಂತಹ ಪಕ್ಷಕ್ಕೆ ತನ್ನ ಇಚ್ಛೆಯಂತೆ ನಡೆಯುವಂತಹ ಒಂದು ಅವಕಾಶ ಈ ಎರಡನ್ನೂ ನಡೆಸಿಕೊಂಡು ಹೋಗುತ್ತಾ ಇದ್ದರು. ಬಾಳಿಗಾರವರ ಈ ಒಂದು ಆಟಿಟ್ಯೂಡ್‌ನ್ನು ನೂತನವಾಗಿ ಬಂದಂತಹ ಸರ್ಕಾರ ನಡೆಸಿಕೊಡಬೇಕೆಂದು ಈ ಸಂದರ್ಭದಲ್ಲಿ ಬಾಳಿಗರ ಜಿಲ್ಲೆಯಲ್ಲಿ ಹುಟ್ಟಿ ಬಂದಂತಹ ನಾನೂ ಕೂಡ ಕೇಳಿಕೊಳ್ಳುತ್ತಾ ಇದ್ದೇನೆ. ವಿರೋಧ ಪಕ್ಷಕ್ಕೆ ಅವರು ಯಾವ ರೀತಿಯಲ್ಲಿ ಮಾನ್ಯತೆ ಕೊಡುತ್ತಿದ್ದರೋ ಅದೇ ಮಾನ್ಯತೆಯನ್ನು ನೂತನವಾಗಿ ಬಂದಂತಹ ಸರ್ಕಾರ ಕೊಡಬೇಕು, ಆ ಜಿಲ್ಲೆಯ ಹಿತಚಿಂತನೆಯನ್ನು ಸದಾ ಸರ್ಕಾರ ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಾ ಇದ್ದೇನೆ.

ಅವರು ಬಂದಂತಹ ಬೆಳ್ತಂಗಡಿ ಕ್ಷೇತ್ರ ಏನಿದೆ ಅದನ್ನು ಬೆಳಕಿನ ಅಂಗಡಿಯಂತೆ ಮಾಡಿದ್ದಾರೆ, ಅಷ್ಟೊಂದು ಪಂಪ್‌ಸೆಟ್ಟುಗಳು ಮತ್ತು ವಿದ್ಯುಚ್ಛಕ್ತಿಯ ಸೌಕರ್ಯವನ್ನು ಅದು ಮರೆನಾಡಾದರೂ ಕೂಡ ಇವತ್ತು ಒಗಿಸಿಕೊಟ್ಟು ಅಲ್ಲಿಗೆ ಇವತ್ತು ಬೆಳಕನ್ನುಂಟುಮಾಡಿದ್ದಾರೆ. ಅದೇ ರೀತಿ ಬೆಳಗಿನ ಅಂಗಡಿಯವರಾದ ಅವರಿಂದ ಈ ಸಭೆಗೂ ಬೆಳಕು ಬರುತ್ತಾ ಇತ್ತು ಆ ಬೆಳಕು ಇವತ್ತಿನ ದಿವಸ ದೂರವಾಗಿದೆ, ಈ ಸಭೆಗೆ ಅಂತಹ ಒಂದು ಬೆಳಕನ್ನು ಕೊಡಬೇಕೆಂದು ಕೇಳಿಕೊಂಡು ಮಾನ್ಯ ಶ್ರೀ ಬಾಳಿಗಾರವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

†ಶ್ರೀ ಎ. ಆರ್. ಪಂಚಗಾವಿ (ಅರಭಾವಿ).—ಮಾನ್ಯ ಸಭಾಪತಿಯವರೇ, ಅತಿನೊಂದ ಹೃದಯದಿಂದ ಈ ಸಭೆಯ ಸದಸ್ಯರು ವ್ಯಕ್ತಪಡಿಸಿದ ದುಃಖದ ಮಾತುಗಳಿಗೆ ನಾನು ಕೂಡ ನನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇನೆ. ಶ್ರೀಮಾನ್ ಬಾಳಿಗಾರವರೊಡನೆ ೫ ವರ್ಷಗಳ ಕಾಲ ನಾನು ಉಪಾಧ್ಯಕ್ಷನಾಗಿ ಈ ಸಭೆಯ ಕೆಲಸ ನಡೆಸಿಕೊಂಡು ಹೋಗುವ ಅವಕಾಶ ನನಗೆ ಸಿಕ್ಕಿತ್ತು. ಅದಕ್ಕೆ ಮುಂಚೆ ಬಹಳ ವರ್ಷಗಳಿಂದ ಅವರ ಪರಿಚಯ ನನಗೆ ಇತ್ತು, ಅನೇಕ ವಿಧದಲ್ಲಿ ಅವರ ಖ್ಯಾತಿಯನ್ನು ಕೇಳಿದ್ದೆ, ಅವರ ವ್ಯಕ್ತಿತ್ವವನ್ನು ಕಂಡಿದ್ದೆ. ಅವರ ಉದ್ದನೆಯ ಟೋಪಿ, ವಿಶಾಲವಾದ ಅಜಾನುಬಾಹು ಶರೀರ ಅದೇ ಪ್ರಕಾರ ವಿಶಾಲವಾದ ಮನಸ್ಸು ಮತ್ತು ಉದಾರ ಹೃದಯ, ಹಾಗೂ ಅವರ ಅನುಭವ ಇವುಗಳು ಅವರೊಡನೆ ಸಂಪರ್ಕಕ್ಕೆ ಬಂದ ಯಾವುದೇ ವ್ಯಕ್ತಿಗಾಗಲಿ ಆಗಿರಲಿಕ್ಕೆ ಸಾಕು ಅವರ ಮನೆಗೆ ಹೋದವರು ಯಾರೂ ಬರೀ ಹೊಟ್ಟೆಯಲ್ಲಿ, ಬರೀ ಕೈಯಿಂದ ಮರಳುತ್ತಾ ಇರಲಿಲ್ಲ. ಅಂತಹ ಒಂದು ಸನ್‌ಮಾನ್ಯ ವ್ಯಕ್ತಿ. ಅವರು ನಮ್ಮ ರಾಜ್ಯದಲ್ಲಿ ಮಾತ್ರ ಇಷ್ಟು ಪ್ರಸಿದ್ಧಿ ಪಡೆದಿರಲಲ್ಲ, ಎಲ್ಲಿ ಹೋದರೂ ಅವರ ಕೀರ್ತಿ ಅವರಿಗಿಂತ ಮುಂಚೆ ಹೋಗಿರುತ್ತಾ ಇತ್ತು. ನಾನು ಅನೇಕ ಸಲ ಪಂಜಾಬು, ಬಿಹಾರ ರಾಜ್ಯದಲ್ಲಿ ತಿರುಗಾಡಿದ್ದೇನೆ, ವಿಘಾನ ಸಭೆಯ ಕಾರ್ಯಕರ್ತರಾಗಲಿ ಸದಸ್ಯರಾಗಲಿ, ಹೊರಗಿನವರಾಗಲಿ ನೀವು ಬಾಳಿಗರ ಪ್ರಾಂತ್ಯದವರೇ ಎಂದು ಕೇಳುತ್ತಾ ಇದ್ದರು. ನೀವು ಅಂತಹ ಭಾಗ್ಯಶಾಲಿಗಳು, ಇಂತಹ ಉತ್ತಮ ಅಧ್ಯಕ್ಷರನ್ನು ಪಡೆದಿದ್ದೀರಿ ಅಂತ ಅನ್ನುವಂತಹ ಮಾತನ್ನು ಮೇಲಿಂದ ಮೇಲೆ ಪ್ರತಿಯೊಬ್ಬರೂ ವ್ಯಕ್ತಪಡಿಸುತ್ತಿದ್ದರು. ಅನೇಕ ಸಲ ಅಧ್ಯಕ್ಷರ ಸಮ್ಮೇಳನಕ್ಕೆ ನಾನು ಹೋಗಿದ್ದಾಗ ಅಲ್ಲಿಯ ಅಧ್ಯಕ್ಷರೂ ಕೂಡ ಬಾಳಿಗರನ್ನು, ಅವರ ಗುರು ಅಂತ ತಿಳಿದುಕೊಂಡು ಅನೇಕರು ತಿಳಿದಂತಹವರೂ ಕೂಡ ಆ ರೀತಿ ನಡೆದುಕೊಳ್ಳುತ್ತಾ ಇದ್ದರು. ಅಂತಹ ವಾನ್ಯತೆ, ವ್ಯಕ್ತಿತ್ವ ಪಡೆದ ವ್ಯಕ್ತಿ, ಶ್ರೀಮಾನ್ ಬಾಳಿಗಾರವರು, ಇವತ್ತು ಅವರು ನಮ್ಮನ್ನು ಅಗಲಿದ್ದು ನಮಗೆಲ್ಲರಿಗೂ ಅತ್ಯಂತ ದುಃಖವನ್ನುಂಟುಮಾಡಿದೆ, ಅವರ ಮನೆಯವರಿಗೂ ಕೂಡ ಅಪಾರ ದುಃಖವುಂಟಾಗಿದೆ, ಅವರಿಗೆ ನಮ್ಮ ಸಹಾನುಭೂತಿಯನ್ನು ನಾನು ವ್ಯಕ್ತಪಡಿಸುತ್ತೇನೆ.

Mr. DEPUTY SPEAKER.—I also associate myself with th sentiments expressed by the Hon'ble Chief Minister, a id the Leade of the Opposition and other members of the House. The question is:

> "That this House records its profound sense of sorrow at the death of Hon'ble Sri B. Vaikunta Baliga, Speaker of this House, who will long be remembered with affection and regard for the distinction with which he discharged the duties of his office, and offers its condolences to the members of the bereaved family".

The motion was adopted.

OBITUARY REFERENCE *re*: DEMISE OF Sriyuts MALI MARIYAPPA Y. VEERUPAKSHAPPA AND SRINIVASA RAO EKHELIKAR

Mr. DEPUTY SPEAKER.—I also regret to make a reference to the death of (1) Sri Mali Mariyappa, a member of the Constituent Assembly during 1948-49, a member of the first and second Legislative Assembly and also a former Minister of the Government of Mysore and also a sitting member of the Lok Sabha on 25th May 1968, (2) Sri Y. Veerupakshappa, a Member of the first and second Legislative Assembly, on 7th June 1968, (3) Sri Srinivasa Rao Ekhelikar, a Member of the first Legislative Assembly.

I shall convey the condolences of this House to the members of the bereaved families.

As a mark of respect we will stand in silence for a minute.

(*The House stood in silence for a minute*)

Mr. DEPUTY SPEAKER.—The House now stands adjourned to meet tomorrow at 1.00 P.M.

———

The House adjourned at Fifteen Minutes past Two of the Clock to meet again at One of the Clock on Tuesday the 3rd September 1968.

———

WD 11116—GPB—600—21-9-68